್ಯಾಸ
ಮಾಲೆ

೫

ಅಭಿರುಚಿಗಳು

ಎ. ಎಸ್. ಧರಣೇಂದ್ರಯ್ಯ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜೂನ್, ೧೯೭೭

ಉಪನ್ಯಾಸ ಗ್ರಂಥಮಾಲೆ

೨೭೫

ಅಭಿರುಚಿಗಳು

ಎ. ಎಸ್. ಧರಣೇಂದ್ರಯ್ಯ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜೂನ್, ೧೯೭೭

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು, ವ್ಯಾಸಂಗವಿಸ್ತರಣ-ಪ್ರಕಟನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫೦೦೦ ಪ್ರತಿಗಳು

ಜೂನ್, ೧೯೭೭

ಬೆಲೆ : ೩೫ ಪೈಸೆ

ಮುದ್ರಕರು:

ಜಿ. ಬಿ. ಮನ್ವಾಚಾರ

ಸಹಾಯಕ ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ - ೫೮೦ ೦೦೨

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗು ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಅದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ
ವಿಶ್ವವಿದ್ಯಾಲಯದ ಹಾಗು ಕಾಲೇಜುಗಳ ಅಧ್ಯಾಪಕರಿಗೆ ಆಯಾ
ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ
ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ
ಹಾಗು ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ
ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ
ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೭೪ ಪುಸ್ತಕಗಳು ಪ್ರಕಟ
ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ
ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ.
ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು
ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನ
ಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗ
ತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ
ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ
ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಆರ್. ಸಿ. ಹಿರೇಮಠ
ಕುಲಪತಿಗಳು

ಉಪಕಾರ ಸ್ಮರಣೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನಾ ವಿಭಾಗದವರು ಏರ್ಪಡಿಸುವ ಉಪನ್ಯಾಸ ಶಿಬಿರಗಳಲ್ಲಿ ಭಾಗವಹಿಸುವ ಅಭಿರುಚಿ ನನಗೆ ಬಹಳ. ಇದಕ್ಕೆ ಪ್ರಬಲ ಕಾರಣ, ಉಪನ್ಯಾಸಗಳ ಬಗ್ಗೆ ಮೇಲ್ಕಂಡ ವಿಭಾಗದವರೂ, ಶಿಬಿರವೇರ್ಪಟ್ಟ ಗ್ರಾಮದ ಶ್ರೋತೃವರ್ಗದವರೂ ತೋರುವ ಆಸಕ್ತಿ. ಕುಕನೂರಿನಲ್ಲಿ ನಡೆದ ಅನೆಯ ಉಪನ್ಯಾಸ ಶಿಬಿರದಲ್ಲಿ ನನ್ನ ಉಪನ್ಯಾಸದ ವಿಷಯ "ಅಭಿರುಚಿಗಳು" ಅಂದಿನ ಉಪನ್ಯಾಸದ ಸಾರವು ಕೆಲವು ಯುಕ್ತ ವಿವರಗಳೊಂದಿಗೆ ಈ ಪುಸ್ತಿಕೆಯ ರೂಪದಲ್ಲಿ ಹೊರಬರುತ್ತಿರುವುದು ಆಹ್ಲಾದಕರ ಸಂಗತಿ.

ವೈವಿಧ್ಯಪೂರ್ಣವಾದ ಆಧುನಿಕ ಜೀವನದ ಬೆಡಗು ಬಿನ್ನಾಣಗಳ ನಡುವೆ ಮನಸ್ಸಿಗೆ ತನಿಸೇಚನೆಯನ್ನೆರೆಯಬಲ್ಲಂತಹ ಚಟುವಟಿಕೆಗಳನ್ನು ಆರಿಸಿಕೊಂಡು ಅವುಗಳಲ್ಲಿ ಮಗ್ನವಾಗಬೇಕಾದರೆ ಉತ್ತಮ ಅಭಿರುಚಿಗಳು ವ್ಯಕ್ತಿಯಲ್ಲಿ ವಿಕಾಸ ಹೊಂದಿರಬೇಕಾಗುತ್ತದೆ. ಅನೇಕ ವೇಳೆ ಅಂತಹ ಅಭಿರುಚಿಗಳನ್ನು ಆತನು ಪ್ರಯತ್ನಪೂರ್ವಕವಾಗಿ ಬೆಳೆಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಅಭಿರುಚಿಗಳ ಬಗ್ಗೆ ಕೊನೆಯ ಪಕ್ಷ ಸ್ಥೂಲವಾದ ಆದರೆ ವಸ್ತುನಿಷ್ಠವಾದ ಜ್ಞಾನ

ವನ್ನು ಪಡೆದಿರುವುದು ಅತ್ಯಗತ್ಯ. ಇಂತಹ ಅಗತ್ಯದ ಪೂರೈಕೆಯಲ್ಲಿ ಈ ಕಿರುಹೊತ್ತಿಗೆಯು ತನ್ನ ಅಲ್ಪಸೇವೆ ಯನ್ನು ನೀಡಬಲ್ಲದೆಂಬುದು ನನ್ನ ನಂಬಿಕೆ.

ಈ ಹೊತ್ತಿಗೆಯು ರೂಪತಾಳಬೇಕಾದರೆ, ಶ್ರೋತೃ ಗಳೂ ಸೇರಿದಂತೆ ಹಲವರು ಪ್ರೇರಣೆ ಪ್ರೋತ್ಸಾಹಗಳನ್ನು ಕೊಟ್ಟಿದ್ದಾರೆ. ಅವರಲ್ಲಿ ಬಹುಮುಖ್ಯವಾಗಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣಾ ವಿಭಾಗದ ನಿರ್ದೇಶಕ ರಾದ ಶ್ರೀ ಚೆನ್ನವೀರ ಕಣವಿಯವರು ಹಾಗೂ ಅವರ ಸಹೋ ದ್ಯೋಗಿಗಳು ಕೊಡುತ್ತಿರುವ ಪ್ರೋತ್ಸಾಹಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನನ್ನ ಬರೆವಣಿಗೆಯನ್ನು ಸದಾ ಪ್ರೋತ್ಸಾಹಿಸುತ್ತಿರುವ ನಮ್ಮ ವಿಭಾಗದ ಮುಖ್ಯಸ್ಥ ರಾದ ಪ್ರೊ. ಕೆ. ಆರ್. ಮಲ್ಲಪ್ಪನವರಿಗೆ ನಾನು ಕೃತಜ್ಞ. ನನ್ನ ಬರೆವಣಿಗೆ ಕಾರ್ಯಕ್ಕೆ ಎಡಬಿಡದೆ ನೆರವು ನೀಡು ತ್ತಿರುವ ನನ್ನ ಶ್ರೀಮತಿಯವರಿಗೂ ನಾನು ಚಿರಋಣಿ.

'ರತ್ನತ್ರಯ' ಎ. ಎಸ್. ಧರಣೇಂದ್ರಯ್ಯ
ನಿರ್ಮಲ ನಗರ ಧಾರವಾಡ–೩
೧೨–೬–೧೯೭೭

" In social life, in personal adjustment, in education and in the occupational world, interest is the vital key to many important situations. We all want to be interested and we want to be interesting, that is, we want to be moved to act upon the world in a satisfying manner and we want the world to react towards us in a equally satisfying fashion. We are only now beginning to realize that the quality of being interestingly may be cultivated, it has its developments in each of us along with the growth of the capacity of being interested. "

—Douglas Fryer.

ಪರಿವಿಡಿ

೧. ರುಚಿ-ಅಭಿರುಚಿ

ರುಚಿ ಆಹಾರದ ಆಂತರ್ಯ. ಘಮಘಮಿಸುವ ಷಡ್ರಸೋಪೇತ ಭೋಜನದ ರುಚಿ ವ್ಯಕ್ತಿಗೆ ಆಹ್ಲಾದವನ್ನುಂಟು ಮಾಡಬಲ್ಲದು. ಮೈಮರೆಸಲೂ ಬಲ್ಲುದು. ಕೋಪಕ್ಕೆ ಹೆಸರಾದ ದೂರ್ವಾಸ ಮಹರ್ಷಿ, ಸ್ವಾರ್ಥಿ ದುರ್ಯೋಧನನಿತ್ತ ಶ್ರೀಮಂತ ಭೋಜನದ ರುಚಿಮಾಧುರ್ಯಕ್ಕೆ ಮಾರುಹೋಗಿ ಕೌರವನ ಕುತಂತ್ರಕ್ಕೆ ನಿಯೋಗಿಯಾಗುವ ಪ್ರಸಂಗ ಭಾರತ ಕಾವ್ಯಪ್ರಿಯರಿಗೆ ರುಚಿಕರವೆನಿಸದಿರದು. ತರ್ಕಬದ್ಧ ಚರ್ಚೆಗಳಿಂದ ಬಗೆಹರಿಯದ ಎಷ್ಟೋ ರಾಜಕೀಯ ಸಮಸ್ಯೆಗಳು, ಭೋಜನಕೂಟದಲ್ಲಿ ಸಲೀಸಾಗಿ ಪರಿಹಾರವಾಗುವ ದೃಷ್ಟಾಂತಗಳಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಾಜಕಾರಣದಲ್ಲಿ ಕೊರತೆಯಿಲ್ಲ. ಪರದೇಶದ ಪ್ರತಿಷ್ಠಿತರಿಗೆ ಪಕ್ವಾನ್ನ ಭೋಜನ ಹಾಕಿಸಿ, ಅವರ ರುಚಿಲೋಭದ ಲಾಭ ಪಡೆದು ತನ್ನ ಕಾರ್ಯಸಾಧನೆ ಮಾಡಿಕೊಳ್ಳುವ ತಂತ್ರ ಬಹುಶಃ ಯಾವ ರಾಷ್ಟ್ರಕ್ಕೂ ಹೊರತಲ್ಲ. ಇಂತಹ ತಂತ್ರವು ವೈಯಕ್ತಿಕ ಹಾಗೂ ಸಾಮಾಜಿಕ ಮಟ್ಟಗಳಲ್ಲಿಯೂ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ನಾಲಿಗೆ ಲಾಲಸೆಯುಳ್ಳ ಅಧಿಕಾರಿಗೋ, ಗುಮಾಸ್ತನಿಗೋ ಅವನವನ ರುಚಿ ಪ್ರಕೃತಿ(ವಿಕೃತಿ)ಗನುಗುಣವಾಗಿ

ಅನ್ನ ಹಾಕಿಸಿ ಚಿನ್ನ ಪಡೆಯುವ ಜನ ಅಪರೂಪವೇನಲ್ಲ
ಅನೇಕ ದೊಡ್ಡ ವ್ಯಕ್ತಿಗಳೆನಿಸಿಕೊಂಡವರಲ್ಲಿ ಕಂಡೂಕಾ
ದಂತಿರಬಹುದಾದ ನಾಲಿಗೆಯ ಲಾಲಸೆಯನ್ನು ರುಚಿಕ
ಔತಣದಿಂದ ತೀರಿಸಿ, ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡ
ಸಾಧಿಸಿಕೊಳ್ಳುವ ಜನ ಎಲ್ಲೆಲ್ಲೂ ಕಾಣಸಿಗುತ್ತಾರೆ.

ಆಹಾರಕ್ಕೆ ರುಚಿಯಿದ್ದಂತೆ, ಜೀವಿತಕ್ಕೆ ಅಭಿರುಚಿ
ಅಭಿರುಚಿ ಇಡೀ ವ್ಯಕ್ತಿತ್ವಕ್ಕೇ ಇರುವ ಒಂದು ಮೆರಗು
ರುಚಿಯಂತೆಯೇ ಅಭಿರುಚಿಯೂ, ವೈಯಕ್ತಿಕ ಮತ್ತು
ಸಾಮಾಜಿಕ ಜೀವನಗಳಲ್ಲಿ ಜನರನ್ನು ಮಂತ್ರಮುಗ್ಧರನ್ನಾ
ಗಿಸಬಲ್ಲದು. ಅವರವರ ರುಚಿಗನುಗುಣವಾದ ಔತಣವೇರ್ಪ
ಡಿಸಿ, ವ್ಯಕ್ತಿಗಳ ಒಲವು ಸಂಪಾದಿಸಿದಂತೆಯೇ, ಅವರವ
ಅಭಿರುಚಿಯನ್ನು ತಿಳಿದು, ಅನುಗುಣವಾದ ಜೀವನ ಸನ್ನಿವೇ
ಗಳನ್ನು ಕಲ್ಪಿಸಿ ಸಂಬಂಧಪಟ್ಟ ವ್ಯಕ್ತಿಗಳ ಒಲವು ಸಂಪಾ
ದಿಸುವುದು ಸ್ಪಷ್ಟಸತ್ಯ. ಮನೆಗೆ ಬಂದ ನೆಂಟನಿಗೆ, ಅವನ
ಅಭಿರುಚಿಗನುಗುಣವಾಗಿ ಮನರಂಜನೆಯೊದಗಿಸಲು ಪ್ರಯ
ತ್ನಿಸುವುದುಂಟು. ಇಂತಹ ವರ್ತನೆಯಿಂದ ನಂಟು ಅಂ
ಕೊಂಡಿರಲು ಹೆಚ್ಚು ಅನುಕೂಲವಾಗುತ್ತದೆ. ಇದೇ ರೀತಿ
ಪರದೇಶದ ಪ್ರತಿಷ್ಠಿತರ ರುಚಿಗನುಗುಣವಾದ, ಸಾಹಿತ್ಯಕಲೆಗ
ದರ್ಶನ, ನೃತ್ಯ ನಾಟಕ ಪ್ರದರ್ಶನ, ಕೃಷಿ ಕೈಗಾರಿಕಾ ಕ್ಷೇತ್ರ
ಗಳ ಸಂದರ್ಶನಗಳನ್ನು ಏರ್ಪಡಿಸಿದಾಗ ಪರಿಣಾಮ ಎಂದು
ಅಹಿತವಾಗದು. ತನ್ನ ಅಭಿರುಚಿಗನುಗುಣವಾದ, ವಸ್ತುಸ್ಥಿ
ಗಳನ್ನು ಕಂಡಾಗ, ಕೇಳಿದಾಗ ಅವನ ಮನಸ್ಸಿಗೆ ಆಹ್ಲಾ

ವಾಗುವುದು ಸಹಜ. ಅಂತಹವನು ನಮ್ಮ ನೆಂಟನಾಗುತ್ತಾನೆ. ಪರದೇಶದಿಂದ ರಾಜಕೀಯ ರಾಯಭಾರಿಯಾಗಿ ಬಂದವ, ಹಿಂದಿರುಗಿದಮೇಲೂ, ಆ ದೇಶದಲ್ಲಿ, ನಮ್ಮ ದೇಶದ ಸಾಂಸ್ಕೃತಿಕ ರಾಯಭಾರಿಯಾಗಿ ಉಳಿಯುತ್ತಾನೆ. ಎರಡು ದೇಶಗಳ ಸಂಬಂಧ ಮಧುರವಾಗಲು ಅಂತಹ ವ್ಯಕ್ತಿಗಳು ಕೊಡುವ ಕೊಡುಗೆ ಅನುಪಮವಾದುದು. ಹೀಗೆ ವ್ಯಕ್ತಿ ಮತ್ತು ಸಮಾಜ ಜೀವನ ಕ್ಷೇತ್ರಗಳಲ್ಲಿ ಅಭಿರುಚಿಗಳು ನಿರ್ವಹಿಸಬಲ್ಲ ಪಾತ್ರ ಬಹು ಮಹತ್ವಪೂರ್ಣವಾದುದು. ವೈಯುಕ್ತಿಕ ಶಾಂತಿ-ಸಮಾಧಾನ, ಸಾಮಾಜಿಕ ಲಾಲಿತ್ಯ-ಸಾಂಗತ್ಯ ಹಾಗೂ ಔದ್ಯೋಗಿಕ ಸಾಧನೆ-ಸಂತೃಪ್ತಿಗಳ ಗಳಿಕೆಗೆ ವೈವಿಧ್ಯಪೂರ್ಣ ಅಭಿರುಚಿ ವಿನ್ಯಾಸವು ಅತ್ಯಗತ್ಯವೆನಿಸದಿರದು.

ಅಭಿರುಚಿಗಳು ಇಷ್ಟು ಮಹತ್ವಪೂರ್ಣವಾಗಿದ್ದಲ್ಲಿ ಅವುಗಳ ಬಗ್ಗೆ ವಿಶೇಷ ತಿಳುವಳಿಕೆ ಪಡೆಯುವುದು ಆವಶ್ಯಕ. ಅವುಗಳ ಸ್ವಭಾವ ಮತ್ತು ವೈವಿಧ್ಯತೆಗಳನ್ನು ತಿಳಿಯುವುದರ ಜೊತೆಗೆ ಅವುಗಳನ್ನು ಪಾರಿಮಾಣಿಕವಾಗಿ ಅಧ್ಯಯನ ಮಾಡಲು ಬಳಕೆಯಲ್ಲಿರುವ ಸಾಧನ ಸಲಕರಣೆಗಳ ಬಗ್ಗೆಯೂ ಸಂಕ್ಷಿಪ್ತವಾದರೂ, ಪ್ರಮುಖವೆನಿಸುವ ವಿವರಗಳನ್ನು ತಿಳಿಯುವುದು ಒಳ್ಳೆಯದು.

ನಮ್ಮ ದೈನಂದಿನ ವ್ಯವಹಾರಗಳಲ್ಲಿ ಪ್ರಕಟವಾಗುವ ನಮ್ಮ ಇಷ್ಟಾನಿಷ್ಟಗಳೇ ಸಾಮಾನ್ಯ ಅರ್ಥದಲ್ಲಿ ಅಭಿರುಚಿಗಳೆನಿಸುತ್ತವೆ. ಆಟ-ಪಾಠ-ನೋಟಗಳಲ್ಲಿ, ಕಲೆ-ಸಾಹಿತ್ಯ

ಗಳಲ್ಲಿ, ವಿಜ್ಞಾನ ಮತ್ತು ಚಿಂತನೆಗಳಲ್ಲಿ ನಮಗಿರುವ ಒಲವಿನ ದಿಸೆಯನ್ನು ಅಭಿರುಚಿಗಳು ಸೂಚಿಸುತ್ತವೆ. ಅವುಗಳಿಂದ ಆಕರ್ಷಿತರಾದಾಗ, ನಮ್ಮ ತನು ಮನ ಧನಗಳನ್ನು ಅವುಗಳ ಪ್ರಗತಿಗಾಗಿ ವಿನಿಯೋಗಿಸಲು ಪ್ರೇರಕ ಶಕ್ತಿಗಳೆಂದರೆ ಅಭಿರುಚಿಗಳು.

ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ, ವ್ಯಕ್ತಿಯಲ್ಲೇ ರೂಪಗೊಂಡು ಆತನನ್ನು ವಿವಿಧ ವಸ್ತು, ವಿಚಾರ ಮತ್ತು ವ್ಯಕ್ತಿಗಳತ್ತ ಆಕರ್ಷಿಸುವ ಅಥವಾ ಅಪಕರ್ಷಿಸುವಂತಹ ವ್ಯಕ್ತಿಯ ಇಷ್ಟಾನಿಷ್ಟಗಳನ್ನು ಸೂಚಿಸಲು 'ಅಭಿರುಚಿಗಳು' ಎಂಬ ಪದವನ್ನು ಬಳಸಲಾಗುತ್ತದೆ. ಉದಾಹರಣೆಗೆ ತನ್ನ ದೈನಂದಿನ ಜೀವನದಲ್ಲಿ ಸಾಪೇಕ್ಷವಾಗಿ ಹೆಚ್ಚು ಸಮಯದ ವರೆಗೆ ನಿರ್ವಹಿಸಲೆಂದು ಯಾವುದಾದರೂ ಒಂದು ಚಟುವಟಿಕೆಯಲ್ಲಿ ವ್ಯಕ್ತಿಯೊಬ್ಬನು ಒಲವನ್ನು ತೋರಿಸಿದಾಗ, ಅದನ್ನು ಆರಿಸಿಕೊಂಡು ಅದರಲ್ಲಿ ಮಗ್ನನಾದಾಗ, ಆ ವ್ಯಕ್ತಿಗೆ ಆ ಚಟುವಟಿಕೆಯಲ್ಲಿ ಅಭಿರುಚಿಯಿದೆ ಎಂದು ಹೇಳಲಾಗುತ್ತದೆ. ಅಭಿರುಚಿಗಳಿಗೆ ವ್ಯಾಖ್ಯೆಯನ್ನು ಕೊಡಲು ಹೆಚ್ಚು ಉಪಯುಕ್ತವಾದ ಒರೆಗಲ್ಲೆಂದರೆ ವ್ಯಕ್ತಿಯ ಆಯ್ಕಾಪ್ರಕ್ರಿಯೆ. ಯಾವುದೇ ನಿರ್ದಿಷ್ಟ ಸಮಯ ಮತ್ತು ಸಮಯಗಳಲ್ಲಿ, ಒಂದೇ ರೀತಿಯ ಎರಡು ಅಥವಾ ಹೆಚ್ಚು ಅವಕಾಶಗಳು ಇದ್ದಾಗ, ಯಾವುದನ್ನು ಆರಿಸಿಕೊಳ್ಳುತ್ತಾನೆ ಎಂಬುದರಲ್ಲಿ ಆತನ ಇಷ್ಟಾನಿಷ್ಟಗಳು ಪ್ರಮುಖ ಪಾತ್ರವಹಿಸುತ್ತವೆ. ಇಂತಹ ಆಯ್ಕಾ

ಪ್ರಕ್ರಿಯೆ, ವ್ಯಕ್ತಿಯಾಯ್ಕೆಯಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಯಾವುದೇ ಚಟುವಟಿಕೆಯತ್ತ ವ್ಯಕ್ತಿಯ ಒಲವು ಬೆಳೆಯಬೇಕಾದರೆ ಆ ಚಟುವಟಿಕೆಯು ಎಷ್ಟರಮಟ್ಟಿಗೆ ವ್ಯಕ್ತಿಗೆ ಸಂತೃಪ್ತಿ ಕೊಡಬಲ್ಲುದು ಎಂಬುದು ಗಮನಿಸಬೇಕಾದ ಅಂಶ. ಅಂದಮೇಲೆ, ಅಭಿರುಚಿ ಮತ್ತು ಸಂತೃಪ್ತಿಗಳು ಪರಸ್ಪರ ಪ್ರೇರಕ ಪೂರಕಗಳಾಗಿರುತ್ತವೆ ಎಂದು ಹೇಳಬಹುದು. ಚಟುವಟಿಕೆಯು ಸಂತೃಪ್ತಿಯೀಯುತ್ತಾಗ ಅದರಲ್ಲಿ ಒಲವು ಹೆಚ್ಚುತ್ತದೆ; ಒಲವು ಹೆಚ್ಚಾದಾಗ, ಚಟುವಟಿಕೆಯ ತೀವ್ರತೆ ಮತ್ತು ವಿಸ್ತಾರಗಳು ಅಧಿಕವಾಗುತ್ತವೆ. ಹೀಗೆ ಇದು ಸಿಹಿಚಕ್ರವಾಗಿ ತಿರುಗುವಾಗ ವ್ಯಕ್ತಿಗೆ ಜೀವನ ರಸಮಯವಾಗಿ ಕಾಣುವುದು ಸಹಜ.

೨. ಅಭಿರುಚಿಗಳು ಹಲವು

ಯಾವುದೇ ಸಮಾಜದಲ್ಲಿ, ಕಾಲ ದೇಶಕ್ಕನುಗುಣವಾಗಿ ವ್ಯಕ್ತಿಗಳು ಹಲವು ಅಭಿರುಚಿಗಳನ್ನು ಹೊಂದಿರುತ್ತಾರೆ. ಇವುಗಳಲ್ಲಿ ಪ್ರಧಾನವಾದ ಅಭಿರುಚಿಗಳು– ಮನರಂಜನೆ, ದೇಹ ಶೃಂಗಾರ, ಓದು, ಹವ್ಯಾಸ, ಸಾಮಾಜಿಕ ಸಾಹಚರ್ಯ ಮತ್ತು ಉದ್ಯೋಗ ಚಟುವಟಿಕೆಗಳಿಗೆ ಸಂಬಂಧಿಸಿರುತ್ತವೆ. ವ್ಯಕ್ತಿಯು ಬೆಳೆದಂತೆಲ್ಲಾ, ಮೇಲ್ಕಂಡ ಚಟುವಟಿಕೆಗಳಲ್ಲಿ ಒಂದಿಲ್ಲ ಒಂದು ರೀತಿ ಅವನ ಅಭಿರುಚಿ ಬೆಳೆಯುತ್ತದೆ. ಕೆಲವು ವ್ಯಕ್ತಿಗಳು, ತಮ್ಮ ಜೀವನದಲ್ಲಿ ಶಾಂತಿ ಸಮಾಧಾನ

ಗಳನ್ನು ಪಡೆಯಲು ಅಭಿರುಚಿಗಳು ಅಗತ್ಯವೆಂಬುದನ್ನು ಮನಗಂಡು, ಪ್ರಯತ್ನಪೂರ್ವಕವಾಗಿ ಅವುಗಳನ್ನು ಬೆಳೆಸಿಕೊಳ್ಳುವುದುಂಟು. ಉಳಿದವರು ಅವುಗಳಿಗೆ ಅಷ್ಟಾಗಿ ಗಮನಕೊಡರು. ಆದಕಾರಣ ಅನೇಕ ವೇಳೆ ಅವರು ಜೀವನದ ರಸ ಸನ್ನಿವೇಶಗಳಿಂದ ವಿಮುಖರಾಗಬೇಕಾಗುತ್ತದೆ. ಹೀಗಾಗಿ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರಗಳಲ್ಲಿ ಹದವರಿತು ನಡೆಯುವಲ್ಲಿ ಅಸಮರ್ಥರಾಗಬೇಕಾಗುತ್ತದೆ. ಆದ್ದರಿಂದ, ಅಭಿರುಚಿಗಳನ್ನು, ವಯೋಮಾನಕ್ಕನುಗುಣವಾಗಿ ಬೆಳೆಸಿಕೊಳ್ಳುವುದು ಅತ್ಯಗತ್ಯ. ಇದನ್ನು ಸಾಧಿಸಬೇಕಾದರೆ, ವ್ಯಕ್ತಿಗೆ ಅಭಿರುಚಿಯ ವಿಕಾಸ, ವಿನ್ಯಾಸದ ಬಗ್ಗೆ ಕೊನೆಯಪಕ್ಷ ಒಂದು ಸ್ಥೂಲ ಕಲ್ಪನೆಯಾದರೂ ಇರಬೇಕಾಗುತ್ತದೆ. ಹಾಗಾದಾಗ ಮಾತ್ರ ಯಥಾರ್ಥ ಅಭಿರುಚಿಗಳನ್ನು ಬೆಳೆಸಿ, ಉಳಿಸಿಕೊಂಡು ಬರುವಲ್ಲಿ ಆತನು ಹೆಚ್ಚು ಕೃತಕೃತ್ಯನಾಗಬಲ್ಲ.

ಅಭಿರುಚಿಗಳ ವಿಕಾಸ

ಅಭಿರುಚಿಗಳ ವಿಕಾಸ ವ್ಯಕ್ತಿಯ ಜೀವನದಾದ್ಯಂತ ನಡೆಯುವ ಒಂದು ನಿರಂತರ ಪ್ರಕ್ರಿಯೆ. ಹಲಕೆಲವು ಅಭಿರುಚಿಗಳು ಚಿಕ್ಕವಯಸ್ಸಿನಲ್ಲೇ ಅಂಕುರಿಸಿ, ಸೊಂಪಾಗಿ ಬೆಳೆದು ವ್ಯಕ್ತಿಯ ಬಾಲ್ಯ ಮತ್ತು ಯೌವನಗಳಲ್ಲಿ ಅವನ ಮನಸ್ಸಿಗೆ ತನಿಸೇಚನೆಯನ್ನೆರೆಯುವಂತಿದ್ದರೆ, ಕೆಲವು ಪ್ರೌಢ ವಯಸ್ಸಿನಲ್ಲಿ ಪ್ರಬಲವಾಗಿರುತ್ತವೆ. ಉಳಿದ ಕೆಲವು

ಮಧ್ಯಮ ವಯಸ್ಸು ಮತ್ತು ವೃದ್ಧಾಪ್ಯಗಳಲ್ಲಿ ಹೆಚ್ಚು ಉಪಯುಕ್ತವೆನಿಸುತ್ತವೆ.

ದೇಹದ ಅಂದ-ಚಂದ : ಅಂಗ ಶೃಂಗಾರದ ಆಸಕ್ತಿ ಮಾನವನಿಗೆ ಸಹಜವಾಗಿ ಬಂದದ್ದಿರಬೇಕು. ಆದಿ ಮಾನವನ ಕಾಲದಿಂದಲೂ, ಮನುಷ್ಯನು ತನ್ನ ಸುತ್ತಮುತ್ತ ದೊರೆಯುವ ಕಲ್ಲು, ಮಣ್ಣು, ಬಳ್ಳಿ, ಹೂವು ಮುಂತಾದ ಪದಾರ್ಥಗಳನ್ನು ತನ್ನ ದೇಹ ಶೃಂಗಾರಕ್ಕಾಗಿ ಬಳಸಿಕೊಂಡು ಬಂದಿದ್ದಾನೆ. ಅವನಲ್ಲಿ ತಂತ್ರಜ್ಞಾನವು ಹೆಚ್ಚಿದಂತೆ ಒರಟು ಶೃಂಗಾರ ಸಾಧನಗಳನ್ನು ಹೆಚ್ಚು ಹೆಚ್ಚು ನಯವಾಗಿ ಮಾರ್ಪಡಿಸಿ ಬಳಸುವ ಪ್ರವೃತ್ತಿ ಹೆಚ್ಚುತ್ತಾ ಬಂದಿರುವುದನ್ನು ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರು ಬಹು ಮನೋಜ್ಞವಾಗಿ ನಿರೂಪಿಸಬಲ್ಲರು. ಇಂದು ವಿಜ್ಞಾನ ಮತ್ತು ತಂತ್ರಜ್ಞಾನಗಳ ಕೃಪೆಯಿಂದ ಸಂಕುಚಿತವಾಗಿರುವ ಈ ವಿಶಾಲ ಪ್ರಪಂಚದ ವಿವಿಧ ಜನಾಂಗಗಳ, ವಿವಿಧ ಸಂಸ್ಕೃತಿಗಳ ಸ್ತ್ರೀ-ಪುರುಷರು ತಮ್ಮ ಉಡುಗೆ ತೊಡುಗೆಗಳಲ್ಲಿ ತೋರುವ ವೈವಿಧ್ಯಪೂರ್ಣ ಅಭಿರುಚಿ ಬಹು ಚೇತೋಹಾರಿಯಾದುದು.

ದೇಹದ ಅಂದ-ಚಂದದ ಬಗ್ಗೆ ಆಸಕ್ತಿ ಬಹು ಚಿಕ್ಕಂದಿನಲ್ಲೇ ಅಂಕುರಿಸುತ್ತದೆ ಎಂದು ಹೇಳಬಹುದು. ಒಂದು ಹೊಸ ಅಂಗಿಯನ್ನು ತೊಡಿಸಿದಾಗ ಹಸುಳೆ ಹಸನ್ಮುಖಿಯಾಗಿ ನಲಿಯುತ್ತದೆ. "ಉಟ್ರೆ ತೊಟ್ರೆ ಪುಟ್ಟಕ್ಕ ಚೆಂದ" ಎಂಬ ನಾಣ್ಣುಡಿಯು ಮಕ್ಕಳಿಗೆ ಆಪ್ಯಾಯಮಾನವಾಗಿರಬಹುದು.

ಹಬ್ಬ ಹರಿದಿನಗಳಲ್ಲಿ ತಮಗೆ ಉಡಿಸಿದ ಹೊಸ ಬಟ್ಟೆ ಮತ್ತು ತೊಡಿಸಿದ ಆಭರಣಗಳನ್ನು ಚಿಕ್ಕಮಕ್ಕಳು ತಮ್ಮ ಓರಗೆಯವರೆದುರು ಹೆಮ್ಮೆಯಿಂದ ಪ್ರದರ್ಶಿಸುವುದು ಸರ್ವರೂ ಕಂಡ ಸತ್ಯ. ಚಿಕ್ಕಂದಿನಲ್ಲಿಯೇ ಒಡವೆ-ವಸ್ತ್ರಗಳ ಬಣ್ಣ ಮತ್ತು ಆಕಾರಗಳ ಆಯ್ಕೆಯಲ್ಲಿ ವ್ಯಕ್ತಿ ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ, ಕೆಂಪು, ಹೆಣ್ಣುಮಕ್ಕಳಿಗೆ ಹೆಚ್ಚು ಪ್ರಿಯವಾಗುವುದಾದರೆ, ಗಂಡುಮಕ್ಕಳಿಗೆ ಹಸುರಿನ ಬಗ್ಗೆ ಅಕ್ಕರೆ ಹೆಚ್ಚು. ವಯಸ್ಸು ಹೆಚ್ಚಿದಂತೆ ಆಯ್ಕಾಭೇದಗಳಲ್ಲಿ ಗಣನೀಯ ಹೆಚ್ಚಳ ಕಂಡುಬರುತ್ತದೆ.

ಉತ್ತರ ಬಾಲ್ಯದಲ್ಲಿ ಗಂಡುಮಕ್ಕಳು ತಮ್ಮ ಅಂದಚಂದಕ್ಕೆ ಅಷ್ಟಾಗಿ ಗಮನ ಕೊಡರು. ಸಾಮಾನ್ಯವಾಗಿ ಆಟ ಮತ್ತು ಕ್ರೀಡೆಗಳಲ್ಲಿ ಬಹಳ ಸಮಯವನ್ನು ಕಳೆಯುವ ಅವರು, ತಮ್ಮ ದೇಹದ ನೋಟದ ಬಗ್ಗೆ ಉದಾಶೀನರಾಗಿರುತ್ತಾರೆ. ಆದರೆ ಹೆಣ್ಣುಮಕ್ಕಳು ಯಾವ ವಯೋಮಾನದಲ್ಲಾದರೂ ತಮ್ಮ ದೇಹದ ಅಂದಚಂದಕ್ಕೆ ಹೆಚ್ಚು ಗಮನ ಕೊಡುವುದನ್ನು ಕಾಣಬಹುದು.

ನವತರುಣ-ತರುಣಿಯರಿಗೆ ತಮ್ಮ ಮುಖಲಕ್ಷಣ, ದೇಹದ ಮಾಟ ಮತ್ತು ವೇಷಭೂಷಣಗಳ ಬಗ್ಗೆ ವಿಶೇಷ ಅಭಿರುಚಿ ಇರುವುದನ್ನು ಕಾಣಬಹುದು. ತಮ್ಮ ಓರಗೆಯವರ ಆದರಲ್ಲಿಯೂ ಭಿನ್ನಲಿಂಗ ವ್ಯಕ್ತಿಗಳ ಗಮನ ಸೆಳೆಯಲು ಈ ವಯಸ್ಕರು ತಮ್ಮ ಉಡುಪುಗಳ

ಬಣ್ಣ ಹಾಗೂ ಬೆಡಗುಗಳಿಗೆ ಆದ್ಯತೆ ಕೊಡುತ್ತಾರೆ. ಉಡುಪುಗಳು ಮತ್ತು ಅಲಂಕಾರ ದ್ರವ್ಯಗಳು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸುತ್ತವೆ ಎಂಬ ಭಾವನೆ ಈ ವಯಸ್ಸಿನ ತರುಣ-ತರುಣಿಯರಲ್ಲಿ ತೀವ್ರವಾಗಿರುತ್ತದೆ. ಆದ್ದರಿಂದ ತಮ್ಮ ಉಡುಗೆ ತೊಡುಗೆ ಹಾಗೂ ಇತರ ಸೌಂದರ್ಯಸಾಧನಗಳಿಗಾಗಿ ತಮ್ಮ ಇತರ ಕೆಲವು ಆವಶ್ಯಕತೆಗಳನ್ನು ತ್ಯಾಗಮಾಡಲೂ ಅವರು ಸಿದ್ಧರಾಗಿರುತ್ತಾರೆ. ಉತ್ತರ ತಾರುಣ್ಯದಲ್ಲಿ ಈ ಪ್ರವೃತ್ತಿ ಹೆಚ್ಚಾಗಿ ಕಂಡುಬರುತ್ತದೆ. ವಿದ್ಯೆ, ಉಡುಪು ಮತ್ತು ವಯಸ್ಸು ಇವುಗಳು ಸಮವಯಸ್ಕರಲ್ಲಿ ವೈಯಕ್ತಿಕ ಪ್ರತಿಷ್ಠೆಯನ್ನು ಹೆಚ್ಚಿಸುವ ಸಂಕೇತಗಳೆಂದು ಈ ವಯಸ್ಕರು ಪೂರ್ಣ ನಂಬಿರುತ್ತಾರೆ. ಆದ್ದರಿಂದಲೇ ತರುಣಿಯರು ತಮ್ಮ ದೇಹದ ಅಂಕುಡೊಂಕುಗಳನ್ನೂ, ತರುಣರು ತಮ್ಮ ವಿಶಾಲ ಎದೆ, ದೀರ್ಘಬಾಹುಗಳು ಹಾಗೂ ಗಂಡಗಾಡಿ ಇವುಗಳನ್ನು ಪ್ರದರ್ಶಿಸುವಲ್ಲಿ ಯಾವ ಅಂಕೆ ಸಂಕೆಗೂ ಒಳಗಾಗಿರುವುದಿಲ್ಲ. ಒಟ್ಟಿನಲ್ಲಿ ಸೊಗಸುಗಾರಿಕೆಗೆ ಈ ವಯಸ್ಸಿನ ತರುಣ ತರುಣಿಯರು ಹೆಚ್ಚು ಮಹತ್ವ ಕೊಡುತ್ತಾರೆ.

ಪ್ರಾಪ್ತವಯಸ್ಕರು ತಮ್ಮ ಸೌಂದರ್ಯಾಭಿರುಚಿಗಳನ್ನು ಬದಲಾದ ಸನ್ನಿವೇಶಗಳಿಗೆ ಅನುಗುಣವಾಗಿ ಮಾರ್ಪಡಿಸಿಕೊಳ್ಳುತ್ತಾರೆ. ವಿವಾಹಿತ ಸ್ತ್ರೀ ಪುರುಷರು ಈ ವಯಸ್ಸಿನಲ್ಲಿ ಹೊಸ ಹೊಸ ಅಭಿರುಚಿಗಳನ್ನು ರೂಪಿಸಿಕೊಳ್ಳುವುದು ಸಾಮಾನ್ಯವಾಗಿ ಕಂಡುಬರುತ್ತದೆ. ವಿವಾಹಿತ ತರುಣಿಯು, ವೈವಾಹಿಕ ಜೀವನದ ಮೊದಲ ವರ್ಷಗಳಲ್ಲಿ ಉಡುಗೆ

ತ್ರೊಡುಗೆಗಳ ವಿನ್ಯಾಸದಲ್ಲಿಯೂ, ಕೇಶಾಲಂಕಾರದಲ್ಲಿಯ
ವೈವಿಧ್ಯಪೂರ್ಣವಾದ ಅಭಿರುಚಿ ತೋರಿಸುವುದು ಇದಕ
ಸೂಕ್ತ ದೃಷ್ಟಾಂತ. ಈ ವೇಳೆಗಾಗಲೇ, ತಮ್ಮ ತಮ್ಮ ದೇಹ
ರೂಪ ಲಕ್ಷಣಗಳನ್ನು ಸ್ವೀಕರಿಸುವ ಮನೋಭಾವ ಬೆಳೆದಿರ
ತ್ತದೆಯಲ್ಲದೆ, ಇರುವ ರೂಪಲಕ್ಷಣಗಳ ಸೊಬಗನ್ನು ಹೆಚ್ಚಿ
ಕೊಳ್ಳುವ ಸಲುವಾಗಿ ಕೆಲವರು ಆಹಾರ ನಿಯಂತ್ರಣ ಹಾಗ
ವ್ಯಾಯಾಮಗಳನ್ನು ಅವಲಂಬಿಸಬಹುದು, ಉಳಿದ ಕೆಲವರ
ಅದಕ್ಕಾಗಿ ಸೌಂದರ್ಯಸಾಧನಗಳನ್ನು ಬಳಸಬಹುದು
ದೇಹದ ತೂಕ ಹೆಚ್ಚುವುದರಬಗ್ಗೆ ಹೆಂಗಸರಿಗೆ ತೀವ್ರ ಕಳವ
ವಿರುತ್ತದೆ. ಸಾಮಾಜಿಕ ಮತ್ತು ವ್ಯಾವಹಾರಿಕ ಕ್ಷೇತ್ರಗಳಲ್ಲಿ
ದೈಹಿಕ ಅಂದ ಚೆಂದಗಳು ಮತ್ತು ಶೃಂಗಾರಗಳಿಗೆ ಸಾಕಷ
ಮಾನ್ಯತೆಯಿಂದೆ ಎಂದು ತಿಳಿದವರು ತಮ್ಮ ದೇಹದ ರೂ
ಲಕ್ಷಣಗಳನ್ನು ಉಡುಪುಗಳು ಮತ್ತು ಸೌಂದರ್ಯವರ್ಧ
ದ್ರವ್ಯಗಳ ನೆರವಿನಿಂದ ಉತ್ತಮಪಡಿಸಿಕೊಳ್ಳಲು ಯತ್ನಿಸ
ತ್ತಾರೆ. ಇದಕ್ಕೆ ಸೂಕ್ತ ಉದಾಹರಣೆಗಳೆಂದರೆ, ಗಂಡಸರಲ್ಲಿ
ಉನ್ನತ ದರ್ಜೆಯ ಅಧಿಕಾರಿಗಳು, ಕಾಲೇಜು ಅಧ್ಯಾಪಕರ
ಗಳು, ಬ್ಯಾಂಕ್ ಅಧಿಕಾರಿಗಳು ಹಾಗೂ ವ್ಯಾಪಾರ ವಸ
ನಿಯೋಗಿಗಳು; ಹೆಂಗಸರಲ್ಲಿ, ಸಾಮಾಜಿಕ ಕಾರ್ಯಕರ್ತೆ
ಯರು, ಅಧ್ಯಾಪಕಿಯರು, ಕಾರ್ಯದರ್ಶಿನಿಯರು ಹಾಗ
ಸ್ವಾಗತಗಾರ್ತಿಯರು.

ತಮ್ಮ ತಮ್ಮ ದೇಹದ ರೂಪಲಕ್ಷಣಗಳ ಬಗ್ಗೆ ಅತೃಪ್ತರ
ದವರಿಗೆ ಸುಂದರ ಉಡುಗೆ ತೊಡುಗೆಗಳು ಹಾಗೂ ಸೌಂದರ

ದ್ರವ್ಯಗಳು ಕ್ಷತಿಪೂರಣೆ ಒದಗಿಸುತ್ತವೆ. ಒಟ್ಟಿನಲ್ಲಿ, ವ್ಯಾವಹಾರಿಕ ಮತ್ತು ಸಾಮಾಜಿಕ ಗೌರವ ಮತ್ತು ಘನತೆಗಳನ್ನು ಸಂಪಾದಿಸಿಕೊಳ್ಳುವುದರಲ್ಲಿ ತೀವ್ರ ಆಸಕ್ತಿಯುಳ್ಳವರೂ ಮತ್ತು ಔದ್ಯೋಗಿಕ ಶ್ರೇಣಿಯನ್ನು ಬಹು ಬೇಗ ಹತ್ತಬೇಕೆಂದಿರುವ ಮಹತ್ವಾಕಾಂಕ್ಷಿಗಳೂ ತಮ್ಮ ಉಡುಗೆ ತೊಡುಗೆ ಹಾಗೂ ನೀಟುಗಾರಿಕೆಗಳಿಗೆ ಆದ್ಯಗಮನ ಕೊಡುತ್ತಾರೆ.

ಪ್ರಾಪ್ತವಯಸ್ಸಿನಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದ ಉಡುಪು ಮತ್ತು ಸೌಂದರ್ಯ ದ್ರವ್ಯಗಳ ಮೇಲಿನ ಮೋಹವು ಮಧ್ಯಮ ವಯಸ್ಸಿನಲ್ಲಿ ಮತ್ತೆ ತಲೆ ಎತ್ತಿ ನಿಲ್ಲುತ್ತದೆ. ತಮ್ಮ ದೇಹದಲ್ಲಿ ಆಗುತ್ತಿರುವ ಅಹಿತಕರ ಬದಲಾವಣೆಗಳನ್ನು ಮರೆಮಾಡುವ ಹಂಬಲದಿಂದ ಕೆಲವರು ಅಲಂಕಾರ ವಸ್ತುಗಳಿಗೆ ಶರಣಾಗುವುದುಂಟು. ತಮ್ಮ ಸಾಧನೆಗಳಲ್ಲಿ ಅತ್ಯುಚ್ಚ ಮಟ್ಟಕ್ಕೆ ಏರಿದ ಗಂಡಸರಲ್ಲಿ ಕೆಲವರು, ತಮ್ಮ ಘನತೆ ಗೌರವಗಳನ್ನು ಕಾಯ್ದುಕೊಂಡು ಬರುವ ನೆಪದಿಂದ ಸೌಂದರ್ಯ ದ್ರವ್ಯಗಳನ್ನು ಬಳಸುವುದನ್ನು ಕಾಣಬಹುದು. ಹೆಂಗಸರಲ್ಲಿಯೂ ಕೆಲವರು ಸಾಮಾಜಿಕ ಮಿಲನದಲ್ಲಿ ತಮ್ಮ ತಮ್ಮ ಹಿರಿತನವನ್ನು ಮೆರೆಯಲು ನೀಟುಗಾರಿಕೆಗೆ ಆದ್ಯಗಮನ ಕೊಡುತ್ತಾರೆ.

ವೃದ್ಧರಲ್ಲಿ ಬಹುಮಂದಿ ತಮ್ಮ ಅಂಗ ಶೃಂಗಾರಕ್ಕೆ ಗಮನ ಕೊಡುವುದಿಲ್ಲ. ಜೀವನದಲ್ಲಿ ಬದಲಾವಣೆಯ ಕಡು ಸತ್ಯವನ್ನು ಅವರು ಸಾಕಷ್ಟು ಅರಿತಿರುತ್ತಾರೆ. ಅಲ್ಲದೆ ಸೌಂದರ್ಯ ಸಾಮಗ್ರಿಗಳಿಗೆ ವ್ಯಯ ಮಾಡುವಷ್ಟು ಅವರು

ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವುದು ಬಹಳ ಕಡಿಮೆ
ಈ ಕಾರಣದಿಂದಲೇ ಬಹುಶಃ ನಿವೃತ್ತ ಅಧಿಕಾರಿಗಳಲ್ಲನೇಕರು
ಸಾಂಪ್ರದಾಯಿಕ ಉಡುಪುಗಳನ್ನು ಬಳಿಸುವುದು. ಹೇಗಾ
ದರೂ ಶುಭ್ರ ವಸ್ತ್ರಗಳನ್ನು ಧರಿಸುವುದು ಅವರಿಗೆ ಹೆಚ್ಚು
ಆಹ್ಲಾದಕರವೆನಿಸುತ್ತದೆ.

ಮನರಂಜನೆ : ದೇಹಕ್ಕೆ ವಿಶ್ರಾಂತಿ ಇದ್ದಂತೆ ಮನ
ಸ್ಸಿಗೆ ಮನರಂಜನೆ. ಕಾರ್ಯೋತ್ಸಾಹವನ್ನು ಪುನರುಜ್ಜೀ
ವಿಸುವುದಕ್ಕೆ ಅದು ಹೆಚ್ಚು ಸಹಕಾರಿ. ಮನರಂಜನಾಭಿ
ರುಚಿಗಳು ಹಸುಳೆತನದಲ್ಲೇ ಸ್ವಲ್ಪಮಟ್ಟಿಗೆ ಪ್ರಕಟವಾಗು
ತ್ತವೆ. ಕಚಗುಳಿ ಇಟ್ಟಾಗ, ಸುಂದರ ವಸ್ತುಗಳನ್ನು
ಕಂಡಾಗ ಹಸುಳೆ ತನಗಾಗುವ ಆನಂದವನ್ನು ತನ್ನ ನಗು
ವಿನ ಮೂಲಕ ಪ್ರಕಟಿಸುತ್ತದೆ. ಅಲ್ಲದೆ ತನಗೆ ಪ್ರಿಯರಾ
ದವರು ಹತ್ತಿರವಿದ್ದಾಗ, ಇತರ ಹಸುಳೆಗಳು ಆಡುವುದನ್ನು
ನೋಡಿದಾಗ, ಕಷ್ಟಕರವಾದುದನ್ನು ಸಾಧಿಸಿದಾಗ ಹಸುಳೆ
ಆಹ್ಲಾದ ಪಡೆಯುತ್ತದೆ. ಉದಾಹರಣೆಗೆ, ಸಣ್ಣ ಜಗುಲಿ
ಯನ್ನು ಪ್ರಯಾಸಪೂರ್ವಕವಾಗಿ ಹತ್ತಿದಾಗ ಅದು ಆನಂದ
ದಿಂದ ಬೀರುತ್ತದೆ.

ಪೂರ್ವಬಾಲ್ಯದಲ್ಲಿ ಹೆಚ್ಚಾಗಿ ಆಟದಿಂದ ಮನರಂಜನೆ
ದೊರೆಯುತ್ತದೆ. ಮಕ್ಕಳು ವಿವಿಧ ಆಟಗಳ ಮೂಲಕ
ಪ್ರಾಕೃತಿಕ ವಸ್ತುಗಳ ಜ್ಞಾನವನ್ನು ಪಡೆದು ನೈಪುಣ್ಯವನ್ನು
ಬೆಳೆಸಿಕೊಳ್ಳುವುದು ಮಾತ್ರವಲ್ಲದೆ, ಅಪಾರ ಮನರಂಜನೆ

ಪಡೆಯುತ್ತಾರೆ. ಈ ವಯಸ್ಸಿನ ಮಕ್ಕಳು ಹೆಚ್ಚು ಆಸಕ್ತರಾಗುವ ಆಟಗಳೆಂದರೆ, ಬೊಂಬೆಯಾಟ, ಮನೆಯಾಟ, ಕಳ್ಳ-ಪೋಲೀಸಿನವ, ಕಣ್ಣುಮುಚ್ಚಾಲೆ, ಲಗೋರಿ ಇತ್ಯಾದಿ. ತಮ್ಮ ಆಟಗಳಿಗೆ ಅವರು ಸಾಮಾನ್ಯವಾಗಿ ಬಳಸುವ ವಸ್ತುಗಳೆಂದರೆ, ಕಲ್ಲು, ಮಣ್ಣು, ಮರಳು, ಮಣಿ, ದೊಣ್ಣೆ, ಕಾಗದ-ಸೀಸದಕಡ್ಡಿ, ಚೆಂಡು ಮುಂತಾದವು. ಈ ವಯಸ್ಕರಿಗೆ ಕಥೆ ಕೇಳುವ ಅಭಿರುಚಿ ಬಹಳ.

ಉತ್ತರ ಬಾಲ್ಯದಲ್ಲಿ, ಬಾಲ-ಬಾಲಕಿಯರ ಆಟದ ವೈವಿಧ್ಯತೆ ಹೆಚ್ಚುತ್ತದೆ. ಆಟಗಳ ಜೊತೆಗೆ ಚಲನಚಿತ್ರಗಳನ್ನು ನೋಡುವುದು, ಕ್ರೀಡಾ ವಿನೋದಗಳನ್ನು ಓದುವುದು, ಕೇಳುವುದು ಹಾಗೂ ನೋಡುವುದು, ಹಬ್ಬ ಹರಿದಿನಗಳಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಶಾಲಾ ವಾರ್ಷಿಕೋತ್ಸವಗಳಲ್ಲಿ ಕ್ರಿಯಾಶೀಲ ಪಾತ್ರವಹಿಸುವುದು ಮುಂತಾದ ಚಟುವಟಿಕೆಗಳಲ್ಲಿ ಮಗ್ನರಾದಾಗ ಹೆಚ್ಚು ಮನರಂಜನೆ ಪಡೆಯುತ್ತಾರೆ. ಈ ವಯಸ್ಸಿನ ಮಕ್ಕಳ ಮನರಂಜನಾ ಚಟುವಟಿಕೆಗಳ ಮೇಲೆ ಓರಗೆಯವರ ಪ್ರಭಾವ ಸಾಕಷ್ಟು ಬಿದ್ದಿರುತ್ತದೆ. ಈ ವೇಳೆಗಾಗಲೇ ಅತಿಮಾನುಷ ಶಕ್ತಿಗಳು, ಸಾಹಸ ಹಾಗೂ ಇತಿಹಾಸಗಳ ಬಗ್ಗೆ ಆಸಕ್ತಿ ಕಡಿಮೆಯಾಗಿರುವುದರಿಂದ ಅವುಗಳಿಗೆ ಸಂಬಂಧಿಸಿದ ಕಥೆಗಳು ಅಷ್ಟಾಗಿ ಮನರಂಜಕವಾಗಲಾರವು.

ನವತರುಣ ತರುಣಿಯರಿಗೆ, ಬಹು ಸಮಯ ವ್ಯಾಸಂಗ ಮತ್ತು ವ್ಯಾಸಂಗೇತರ ಚಟುವಟಿಕೆಗಳಲ್ಲಿ ಕಳೆಯುವುದರಿಂದ

ಪ್ರತ್ಯೇಕ ಮನರಂಜನಾ ಚಟುವಟಿಕೆಗಳಿಗೆ ಅಷ್ಟಾಗಿ ಸಮಯ ಉಳಿಯದು. ಸಾಯಂಕಾಲ ಮತ್ತು ರಜಾ ದಿನಗಳಲ್ಲಿ ಆಟ ಆಡುವುದು, ಚಲನಚಿತ್ರಗಳನ್ನು ನೋಡುವುದು, ಕಥೆ ಕಾದಂಬರಿಗಳನ್ನು ಓದುವುದು, ಆಕಾಶವಾಣಿ ಕಾರ್ಯಕ್ರಮ ಗಳನ್ನು ಕೇಳುವುದು ಮುಂತಾದ ಚಟುವಟಿಕೆಗಳಲ್ಲಿ ಈ ವಯ ಸ್ಕರ ಅಭಿರುಚಿ ಹೆಚ್ಚಿರುತ್ತದೆ. ಲಘುಸಂಗೀತ (ಸಿನಿಮಾ ಹಾಡುಗಳು)ವನ್ನು ಕೇಳುವುದು ಈ ವಯಸ್ಕರ ಗೀಳುಗಳ ಲ್ಲೊಂದು. ಟ್ರಾನ್ಸಿಸ್ಟರ್‌ಗಳನ್ನು ಜೊತೆಗೊಯ್ಯುವುದೆಂದರೆ ಈ ವಯಸ್ಕರಲ್ಲಿ ಕೆಲವರಿಗೆ ಅತಿ ಮೋಜಿನ ಸಂಗತಿ.

ಉತ್ತರ ತಾರುಣ್ಯದಲ್ಲಿ ಮನರಂಜನೆಗಾಗಿರುವ ಸಮಯ ಇನ್ನೂ ಕಡಿಮೆಯಾಗುತ್ತದೆ. ವ್ಯಾಸಂಗದ ಹೊರೆಯ ಜೊತೆಗೆ ಮನೆಯ ಕೆಲವು ಸಣ್ಣಪುಟ್ಟ ಕೆಲಸಗಳ ಹೊಣೆಗಾ ರಿಕೆ ಬೀಳುವುದೇ ಇದಕ್ಕೆ ಕಾರಣ. ತಮಗಿರುವ ವೇಳೆಗೆ ತಕ್ಕಂತೆ ಬಹಳ ಇಷ್ಟವಾದ ಕೆಲವು ಮನರಂಜನೆಗಳನ್ನು ಈ ವಯಸ್ಕರು ಆರಿಸಿಕೊಳ್ಳುತ್ತಾರೆ. ಸಾಮೂಹಿಕ ಚಟುವಟಿಕೆ ಗಳಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಆದರೆ ತರುಣ ತರುಣಿ ಯರು ಜೊತೆಗೂಡಿ ಸರಸ ಸಂಭಾಷಣೆಯಲ್ಲಿ ಕಾಲಹರಣ ಮಾಡುವ ಇಚ್ಛೆಯು ತೀವ್ರವಾಗಿರುತ್ತದೆ. ಈ ವಯಸ್ಸಿನ ತರುಣರಿಗೆ ಕ್ರೀಡಾ ಸಮಾಚಾರ ಕೇಳುವುದು ಮತ್ತು ಸಂಗ್ರ ಹಿಸುವುದು ಬಹು ಪ್ರಿಯವಾದರೆ, ತರುಣಿಯರಿಗೆ ಸಂಗೀತಾ ಭ್ಯಾಸ, ಹೊಲಿಗೆ ಮತ್ತು ಧ್ವನಿಮುದ್ರಿಕೆಗಳನ್ನು ಕೇಳುವುದ ರತ್ತ ಹೆಚ್ಚು ಒಲವಿರುತ್ತದೆ. ಉನ್ನತ ವ್ಯಾಸಂಗದಲ್ಲಿ ನಿರತ

ರಾಗಿರುವ ತರುಣ ತರುಣಿಯರು, ಸಾಹಿತ್ಯರಚನೆ, ಸಮಾಜಸೇವೆ, ಓದುವುದು, ಜನಪ್ರಿಯ ಸಂಗೀತ ಕೇಳುವುದು, ಚಲನಚಿತ್ರ ನೋಡುವುದು ಮುಂತಾದ ಚಟುವಟಿಕೆಗಳಲ್ಲಿ ಹೆಚ್ಚು ಮಗ್ನರಾಗಿರುತ್ತಾರೆ. ಚಲನಚಿತ್ರಗಳಲ್ಲಿ, ತರುಣಿಯರಿಗೆ ಪ್ರಣಯ ಸನ್ನಿವೇಶಗಳು ಹೆಚ್ಚು ಪ್ರಿಯವಾದರೆ, ತರುಣರಿಗೆ ಸಾಹಸಮಯ ಸನ್ನಿವೇಶಗಳು ಹೆಚ್ಚು ಮೋಜೆನಿಸುತ್ತವೆ. ಈ ವಯಸ್ಕರು ಮನೋವಿಲಾಸದಲ್ಲಿ ಲೀನವಾಗುವುದೂ ಉಂಟು. ಆದರೆ ವಯಸ್ಸು ಹೆಚ್ಚಾದಂತೆ, ವಾಸ್ತವಿಕತೆಯ ಅರಿವು ಹೆಚ್ಚುತ್ತಾ ಹೋಗುವುದರಿಂದ, ಮನೋವಿಲಾಸದಲ್ಲಿ ಲೀನವಾಗುವುದು ಕಡಿಮೆಯಾಗುತ್ತಾ ಬರುತ್ತದೆ.

ಪ್ರೌಢಜೀವನದಲ್ಲಿ, ಮನರಂಜನೆಗಾಗಿ ಸಿಗುವ ಸಮಯ ಅತ್ಯಲ್ಪ. ಆದ್ದರಿಂದ ಮನರಂಜನಾ ಅಭಿರುಚಿಗಳಲ್ಲಿ ಬಹಳಷ್ಟು ಆಯ್ಕೆ ಇರುತ್ತದೆ. ದಿನಪತ್ರಿಕೆ ಮತ್ತು ವಾರಪತ್ರಿಕೆಗಳನ್ನೋದುವುದು ಈ ವಯಸ್ಕರಲ್ಲಿ ಸಾಮಾನ್ಯವಾಗಿ ಕಂಡುಬರುವ ಮನರಂಜನಾ ಚಟುವಟಿಕೆ. ಒಂದೊಂದು ಸಲ ಇವರು ಚಲನಚಿತ್ರಗಳನ್ನು ನೋಡುವುದೂ ಉಂಟು. ಆದರೆ ೩೫ ವರ್ಷ ವಯಸ್ಸಿನ ಅನಂತರ ಈ ಅಭಿರುಚಿ ಶೇ. ೬೦ ರಷ್ಟು ಕಡಿಮೆಯಾಗುತ್ತದೆ. ಸ್ತ್ರೀಯರು ಪ್ರಣಯ ಚಿತ್ರಗಳನ್ನು ಹೆಚ್ಚು ಇಷ್ಟಪಟ್ಟರೆ, ಪುರುಷರು ವಿನೋದಪೂರ್ಣ ಹಾಗೂ ಸಾಹಸಮಯ ಚಿತ್ರಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಕೆಲವರು ಆಕಾಶವಾಣಿ ಕಾರ್ಯಕ್ರಮಗಳನ್ನು ಕೇಳುವುದೂ ಉಂಟು. ಸ್ತ್ರೀಯರು ಜನಪ್ರಿಯ ಸಂಗೀತ ಮತ್ತು ನಾಟಕ

ಗಳನ್ನು ಹೆಚ್ಚಾಗಿ ಕೇಳಿದರೆ, ಪುರುಷರು, ವಾರ್ತೆಗಳು, ರೇಡಿಯೋ ಭಾಷಣಗಳು, ಕ್ರೀಡಾ ಸಂಗತಿಗಳು ಮತ್ತು ವಾದ್ಯ ಸಂಗೀತ ಇವುಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಈ ವಯಸ್ಕರು ಆಟ ಮತ್ತು ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗ ವಹಿಸುವುದು ಬಹಳ ಕಡಿಮೆ. ಆದರೆ ಕ್ರೀಡಾಮಹೋತ್ಸವ ಗಳನ್ನು ನೋಡಲು ತಪ್ಪದೆ ಹೋಗುತ್ತಾರೆ. ಮೇಲ್ವರ್ಗದ ಗಂಡಸರು ಕ್ರೀಡಾ ಸಂಘಗಳನ್ನು ಸ್ಥಾಪಿಸಿಕೊಂಡು, ಬಿಡುವು ವೇಳೆಯಲ್ಲಿ ಟೇನಿಸ್, ಬ್ಯಾಡ್‌ಮಿಂಟನ್‌ನಂತಹ ಆಟಗಳನ್ನು ಆಡುವುದುಂಟು. ಅವಕಾಶವಿದ್ದರೆ, ಕೆಳವರ್ಗದ ಗಂಡಸರು ಈಜುವುದರ ಮೂಲಕ ಮನರಂಜನೆ ಪಡೆಯುತ್ತಾರೆ.

ಪ್ರಾಪ್ತವಯಸ್ಕರಿಗೆ ಹೋಲಿಸಿದರೆ, ಮಧ್ಯಮ ವಯಸ್ಸಿನ ಸ್ತ್ರೀ ಪುರುಷರಿಗೆ ಹೆಚ್ಚು ವಿರಾಮ ವೇಳೆ ಸಿಗುತ್ತದೆ. ಅವರ ಪ್ರಮುಖ ಅಭಿರುಚಿಗಳೆಂದರೆ, ಓದುವುದು, ಆಟ ಗಳನ್ನು ನೋಡುವುದು ಹಾಗೂ ಆಕಾಶವಾಣಿ ಕಾರ್ಯಕ್ರಮ ಗಳನ್ನು ಕೇಳುವುದು. ವಯಸ್ಸು ಹೆಚ್ಚಿದಂತೆ ಅವುಗಳ ಸಂಖ್ಯೆ ಕಡಿಮೆಯಾಗುತ್ತದೆ. ತಮಗೆ ಅತ್ಯಂತ ಹೆಚ್ಚು ಸಂತೋಷ ಕೊಡುವ ಚಟುವಟಿಕೆಗಳನ್ನಷ್ಟು ಮಾತ್ರ ಅವರು ಉಳಿಸಿ ಕೊಳ್ಳುತ್ತಾರೆ. ಈ ವಯಸ್ಕರಿಗೆ ಬಂಧು ಮಿತ್ರರ ಭೇಟಿ ಹೆಚ್ಚು ಮನರಂಜನೆ ಕೊಡುತ್ತದೆ. ಹೇಗಾದರೂ ಸ್ತ್ರೀ ಪುರುಷರ ಮತ್ತು ವಿವಿಧ ಸಾಮಾಜಿಕ ಆರ್ಥಿಕ ವರ್ಗದ ಜನರ ಅಭಿರುಚಿಗಳಲ್ಲಿ ಗಣನೀಯ ವ್ಯತ್ಯಾಸಗಳು ಕಂಡುಬರುತ್ತವೆ.

ವೃದ್ಧಾಪ್ಯದಲ್ಲಿ, ಮಧ್ಯಮವಯಸ್ಸಿನ ಮನರಂಜನಾಭಿರುಚಿಗಳು ಸ್ವಲ್ಪಮಟ್ಟಿಗೆ ಮುಂದುವರಿದರೂ, ವ್ಯಾಪ್ತಿ ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಓದುವುದು ಮತ್ತು ಆಕಾಶವಾಣಿ ಕಾರ್ಯಕ್ರಮಗಳನ್ನು ಕೇಳುವುದು ಹೆಚ್ಚು ಪ್ರಿಯವಾಗಿ ಕಂಡುಬಂದರೂ ಈ ವಯಸ್ಕರಿಗೆ ಧಾರ್ಮಿಕ ಚಟುವಟಿಕೆಗಳು ಹೆಚ್ಚು ಮನರಂಜನೆ ಒದಗಿಸ ಬಲ್ಲವು. ದೈಹಿಕ ಕುಂದುಕೊರತೆಗಳ ನಿಮಿತ್ತ ಹೊರಾಂಗಣಾ ಚಟುವಟಿಕೆಗಳು ಅತಿ ವಿರಳ. ಆದರೆ ಮೊಮ್ಮಕ್ಕಳೊಂದಿಗೆ ಒಳಾಂಗಣಾ ಕ್ರೀಡೆಗಳಲ್ಲಿ ತೊಡಗುವುದರ ಮೂಲಕ ವೃದ್ಧರು ಹೆಚ್ಚು ಮನರಂಜನೆ ಪಡೆಯುತ್ತಾರೆ.

ಆಯಾಯ ವಯೋಮಾನಕ್ಕನುಗುಣವಾದ ಮನರಂಜನಾಭಿರುಚಿಗಳನ್ನು ಪ್ರಯತ್ನಪೂರ್ವಕವಾಗಿ ಬೆಳೆಸಿ ಉಳಿಸಿಕೊಂಡು ಬರುವಂಥವರ ಜೀವನ ಹೆಚ್ಚು ಹರ್ಷದಾಯಿಯಾಗಿರುತ್ತದೆ. ಅಭಿರುಚಿಗಳು, ನಾವು ಬೇಕೆಂದಾಗ ನಮ್ಮಲ್ಲಿ ತಕ್ಷಣ ಉಂಟಾಗುವ ವಸ್ತುಗಳಲ್ಲ. ಅವುಗಳನ್ನು ಮನಸ್ಸಿಟ್ಟು ಬೆಳೆಸಿಕೊಂಡಾಗ ಮಾತ್ರ ಹೆಚ್ಚು ಸುಖದಾಯಿಗಳಾಗಿ ಪರಿಣಮಿಸುತ್ತವೆ. ವೃದ್ಧಾಪ್ಯದಲ್ಲಂತೂ ಅವುಗಳ ಅಗತ್ಯ ಬಹಳ.

ಹವ್ಯಾಸಗಳು : ಹವ್ಯಾಸಗಳು ಉತ್ತಮ ಮನರಂಜನಾ ಕ್ರಿಯೆಗಳಾದರೂ, ಅವುಗಳ ಬಗ್ಗೆ ಅಭಿರುಚಿ ಕೆಲವರಲ್ಲಿ ಮಾತ್ರ ಬೆಳೆದಿರುತ್ತದೆ. ಅಂತಹವರು ವಿಶೇಷ ಆಸಕ್ತಿ ತಳೆದು, ಹವ್ಯಾಸಗಳಲ್ಲಿ ಮಗ್ನರಾಗುವುದನ್ನು ನಾವು ಕಾಣ

ಬಹುದು. ಛಾಯಾಚಿತ್ರಣದಲ್ಲಿ ವಿಶೇಷ ಅಭಿರುಚಿ ಬೆಳ
ಕೊಂಡವರು, ಪ್ರಕೃತಿಯ ವೈವಿಧ್ಯಪೂರ್ಣ ಸನ್ನಿವೇಶಗಳನ
ಛಾಯಾಚಿತ್ರಗಳಲ್ಲಿ ಸೆರೆಹಿಡಿಯಲು ಸದಾ ತವಕಿಸುತ್ತಾರ
ಮಕ್ಕಳಲ್ಲಿ ಸಂಗ್ರಹ ಹವ್ಯಾಸವು ಬಲು ತೀವ್ರವಾಗಿರುತ್ತದ
ಅವರ ಅಂಗಿ ಮತ್ತು ಚಡ್ಡಿ ಜೇಬುಗಳು ವಸ್ತುಸಂಗ್ರಹ
ಲಯಗಳಾಗಿರುತ್ತವೆ. ಅವುಗಳ ತುಂಬ ಗೋಲಿ, ಖಾ
ಸಿಗರೇಟ್ ಪ್ಯಾಕ್‌ಗಳು, ಸ್ಟಾಂಪುಗಳು ಮುಂತಾದ ನಾನ
ರೀತಿಯ ವಸ್ತುಗಳು ತುಂಬಿರುತ್ತವೆ. ಹಾಗೆ ಸಂಗ್ರಹಿಸು
ದರಿಂದ ಅವರಿಗೆ ಅಪಾರ ಹರ್ಷವುಂಟಾಗುತ್ತದೆ. ಅದರಿಂ
ಅವರ ಸಂಗ್ರಹ ಪ್ರವೃತ್ತಿಯೂ ತೃಪ್ತಿಗೊಳ್ಳುತ್ತದೆಯಲ್ಲ
ಓರಗೆಯವರಲ್ಲಿ ಅವರ ಪ್ರತಿಷ್ಠೆ ಹೆಚ್ಚುತ್ತದೆ.

ತಾರುಣ್ಯದಲ್ಲಿ ಅಷ್ಟಾಗಿ ವ್ಯಾಪಕರೀತಿಯ ಹವ್ಯಾಸಗಳ
ಕಂಡುಬರುವುದಿಲ್ಲ. ಕೆಲಕೆಲವು ತರುಣ ತರುಣಿಯರು
ಛಾಯಾಚಿತ್ರಣ, ವರ್ಣಚಿತ್ರರೂಪಣ, ಸಾಹಿತ್ಯಲೇಖ
ಮುಂತಾದ ಹವ್ಯಾಸಗಳನ್ನು ಬೆಳೆಸಿಕೊಂಡಿರುತ್ತಾರೆ. ಪ್ರಾಪ್ತ
ವಯಸ್ಕರಲ್ಲಿ, ಹಣದ ಅನುಕೂಲತೆ ಇದ್ದ ಕೆಲವರು ಹಾಗ
ಉದ್ಯೋಗದಲ್ಲಿ ಜಯಶೀಲರಾದವರಲ್ಲಿ ಕೆಲವರು, ಇಷ
ವಸ್ತು ಸಂಗ್ರಹ, ಕೈತೋಟ ಬೆಳೆಸುವುದು, ಸಂಗೀತ, ನಟ
ಮುಂತಾದ ಹವ್ಯಾಸಗಳಲ್ಲಿ ಮಗ್ನರಾಗಿರುತ್ತಾರೆ. ಈ ವಯ
ಸ್ಸಿನ ಹವ್ಯಾಸಿಗಳೇ, ಸಂಗೀತ, ನಾಟಕ ಮತ್ತು ಕಲ
ಮಂಡಳಿಗಳನ್ನು ಸ್ಥಾಪಿಸಿ ಮನೋಲ್ಲಾಸಕ್ಕಾಗಿ ಮುಂದ

ವರಿಸಿಕೊಂಡು ಬರುತ್ತಿರಾದ್ದರಿಂದ ಹವ್ಯಾಸಿ ಕಲಾವಿದ ರೆನಿಸಿಕೊಳ್ಳುತ್ತಾರೆ.

ಮಧ್ಯಮ ವಯಸ್ಕರಲ್ಲಿಯೂ ಇದೇ ರೀತಿಯ ಕೆಲವು ಹವ್ಯಾಸಗಳು ಹೆಚ್ಚು ಸಂತೋಷವನ್ನು ಕೊಡುತ್ತವೆ. ಆದರೆ ಅಂತಹ ಹವ್ಯಾಸಗಳು ಅವರಲ್ಲಿ ಮೊದಲಿನಿಂದಲೂ ಮನೆ ಮಾಡಿಕೊಂಡಿರಬೇಕು. ಇಲ್ಲದಿದ್ದರೆ, ಹೊಸದಾಗಿ ಅವುಗಳನ್ನು ಬೆಳಸಿ ಉಳಿಸಿಕೊಂಡು ಬರುವುದು ಅಸಾಧ್ಯ. ಜೀವನದಲ್ಲಿ ಹೆಚ್ಚು ಸಾರ್ಥಕತೆ ಪಡೆದ ಸ್ತ್ರೀ ಪುರುಷರಲ್ಲಿ, ಉತ್ತಮ ಕಲಾಕೃತಿಗಳ ಸಂಗ್ರಹದಂತಹ ಹವ್ಯಾಸಗಳು ಹೆಚ್ಚು ಸಾಮಾನ್ಯ. ಈ ವಯಸ್ಸಿನ ಹೆಂಗಸರು, ಹೊಲಿಗೆ, ಕೈತೋಟ ಮಾಡುವುದು, ಹೊಸ ರುಚಿಸೃಷ್ಟಿ, ಉತ್ತಮ ಕಸೂತಿ ಕೆಲಸ, ಕಲಾಕೃತಿಗಳ ಸಂಗ್ರಹ ಮುಂತಾದ ಹವ್ಯಾಸಗಳನ್ನು ಹೊಂದಿರುತ್ತಾರೆ.

ವೃದ್ಧಾಪ್ಯದಲ್ಲಿ, ನಾನಾ ಕಾರಣಗಳಿಗಾಗಿ ಹವ್ಯಾಸಗಳು ಉಳಿಯುವು. ಆ ಕಾರಣಗಳಲ್ಲಿ ಬಹು ಮುಖ್ಯವಾದವು, ದೈಹಿಕ ದುರ್ಬಲತೆ ಮತ್ತು ಆರ್ಥಿಕ ಅಡಚಣೆಗಳು. ಈ ವಯಸ್ಕರಿಗೆ ಹೆಚ್ಚು ಪ್ರಿಯವಾದ ಹವ್ಯಾಸ, ಧಾರ್ಮಿಕ ಚಟುವಟಿಕೆ.

ಓದು : ಬಹು ಜನ ಅಶಿಕ್ಷಿತರಿರುವ ನಮ್ಮ ದೇಶದಲ್ಲಿ ಓದಿನ ಅಭಿರುಚಿ ಕೇವಲ ಕೆಲವರಲ್ಲಿ ಕಂಡುಬರುತ್ತದೆ. ಅವರಲ್ಲಿಯೂ ಕೂಡ ವ್ಯಕ್ತಿವ್ಯತ್ಯಾಸಗಳು ಬಹಳ. ಈ

ಅಭಿರುಚಿಗಳು ವ್ಯಕ್ತಿಯ ವಿದ್ಯಾಭ್ಯಾಸದ ಜೊತೆಜೊತೆಗೆ ಬೆಳೆಯುತ್ತಾ ಹೋಗುತ್ತವೆ. ಬಾಲ್ಯದಲ್ಲಿ, ಶಾಲೆಗೆ ಸೇರಿ ಹೊಸದರಲ್ಲಿ ಓದು ಬರೆಹ ಕಲಿಯುವುದರತ್ತ ತೀವ್ರ ಆಸಕ್ ಪ್ರಕಟವಾಗುತ್ತದೆ. ಆದರೆ ಈ ಆಸಕ್ತಿ ಹಾಗೆ ಮುಂದ ವರಿಯದೆ ಅದರಲ್ಲಿ ಏರುಪೇರುಗಳು ಕಾಣಿಸಿಕೊಳ್ಳುತ್ತವೆ ಕ್ರೀಡಾ ಮನೋಭಾವದಿಂದ ಓದನ್ನು ಪ್ರಾರಂಭಿಸಿದ ಬಾ ಬಾಲಕಿಯರಿಗೆ ಅದರಿಂದ ಹೆಚ್ಚು ಮನರಂಜನೆ ದೊರೆಯ ತ್ತದೆ. ಅಂತಹವರಿಗೆ ಓದು ಆಕರ್ಷಣೀಯವೂ, ಆನಂ ದಾಯಕವೂ ಆಗಿ ಪರಿಣಮಿಸುತ್ತದೆ. ಓದಿನಲ್ಲಿ ಅಭಿರುಚಿ ನೆ ನಿಲ್ಲಲು ಶಾಲೆಯ ವಾತಾವರಣ, ಗುರುಗಳ ಪ್ರೋತ್ಸಾಹ ತಂದೆತಾಯಿಗಳು ಒದಗಿಸಬಲ್ಲ ಅನುಕೂಲ ವಾತಾವರ ಇವೆಲ್ಲ ಪ್ರಧಾನಕಾರಕಗಳು.

ನವತರುಣ ತರುಣಿಯ ಓದಿನ ಅಭಿರುಚಿಯಲ್ಲಿ ವ್ಯಾಪ ವ್ಯಕ್ತಿವ್ಯತ್ಯಾಸಗಳು ಕಂಡುಬರುತ್ತವೆ. ಕೆಲವರಿಗೆ ಪಾ ಪ್ರವಚನಗಳು ಮತ್ತು ಪರೀಕ್ಷೆಗಳೆಂದರೆ ಇಲ್ಲದ ತಲೆನೋವು ಆದರೆ ಕೆಲವರಿಗೆ ಅವುಗಳ ಬಗ್ಗೆ ಉತ್ಕಟೇಚ್ಛೆಯಿರುತ್ತದ ಅಂತಹವರಿಗೆ ವ್ಯಾಸಂಗ ಚಟುವಟಿಕೆಗಳಲ್ಲಿ ಕ್ರೀಡಾ ಮನೋ ಭಾವವಿರುತ್ತದೆಯಲ್ಲದೆ, ಅವರು ತಮ್ಮ ವಿರಾಮವೇ ಯನ್ನು ಪುಸ್ತಕ ಭಂಡಾರದಲ್ಲಿ ಕಳೆಯಲು ಇಷ್ಟಪಡುತ್ತಾರೆ ತರುಣರು ಸಾಮಾನ್ಯವಾಗಿ ವಿಜ್ಞಾನ ಮತ್ತು ಅನ್ವೇಷಣೆಗಳ ಸಂಬಂಧಿಸಿದ ಸಾಹಿತ್ಯವನ್ನು ಹೆಚ್ಚಾಗಿ ಓದಿದರೆ, ತರು

ಯರು ಹಾಸ್ಯಲೇಖನಗಳು ಮತ್ತು ಪ್ರಣಯ ಕಥೆಗಳನ್ನು ಹೆಚ್ಚಾಗಿ ಓದುತ್ತಾರೆ.

ಉತ್ತರ ತಾರುಣ್ಯದಲ್ಲಿ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ತರುಣ ತರುಣಿಯರಲ್ಲಿ ಕೆಲವರಿಗೆ ಓದುವುದು ಹವ್ಯಾಸವಾಗಿಬಿಟ್ಟಿರುತ್ತದೆ. ಅಂತವರು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಓದುವುದು, ವೃತ್ತಪತ್ರಿಕೆಗಳಲ್ಲಿ ವಿನೋದಕ್ರೀಡೆ ಹಾಗೂ ಗಂಭೀರ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಓದುವುದು ಹೆಚ್ಚು.

ಪ್ರಾಪ್ತವಯಸ್ಕರಲ್ಲಿ ಓದುವುದು ಪ್ರಮುಖ ಅಭಿರುಚಿ. ಇರುವ ಸ್ವಲ್ಪ ಸಮಯದಲ್ಲಿ ವೃತ್ತ ಮತ್ತು ಸಂಕೀರ್ಣ ಪತ್ರಿಕೆಗಳಲ್ಲಿ ಬಹುಮಟ್ಟಿಗೆ ಆಯ್ದ ಲೇಖನಗಳನ್ನು ಓದುತ್ತಾರೆ. ಕ್ರೀಡೆಗಳು, ವ್ಯಕ್ತಿಚಿತ್ರಗಳು, ವಿನೋದ, ಹಿಂಸಾಚಾರ ಅಪರಾಧ ಮುಂತಾದ ವಿಷಯಗಳ ಬಗ್ಗೆ ಓದುವುದೇ ಹೆಚ್ಚು. ಮೇಲ್ವರ್ಗದ ಪ್ರೌಢರು ಹೆಚ್ಚು ಪುಸ್ತಕಗಳು ಮತ್ತು ಸಂಕೀರ್ಣ ಪತ್ರಿಕೆಗಳನ್ನು ಓದಿದರೆ, ಕೆಳವರ್ಗದವರು ಕಲ್ಪಿತ ಕತೆಗಳನ್ನು ಹೆಚ್ಚಾಗಿ ಓದುತ್ತಾರೆ.

ಮಧ್ಯಮ ವಯಸ್ಕರು ಬದಲಾಗುತ್ತಿರುವ ತಮ್ಮ ಜೀವನ ರೀತಿ ನೀತಿಗಳಿಗೆ ಅನುಗುಣವಾಗಿ ತಮ್ಮ ಓದಿನ ಅಭಿರುಚಿಯನ್ನು ಹೆಚ್ಚು ಸೀಮಿತಗೊಳಿಸಿಕೊಳ್ಳುತ್ತಾರೆ. ಓದುವ ವಿಷಯದಲ್ಲಿ ಬಹಳ ಆಯ್ಕೆ ಇರುತ್ತದೆ. ಉದಾಹರಣೆಗೆ

ವೃತ್ತಪತ್ರಿಕೆಗಳಲ್ಲಿ ಸಂಪಾದಕೀಯವನ್ನು ಬಿಡದೆ ಓದುತ್ತಾರೆ. ಪುಸ್ತಕಗಳಲ್ಲಿ ಇತಿಹಾಸ ಮತ್ತು ಪ್ರಣಯ ಪ್ರಸಂಗಗಳಿಗೆ ಸಂಬಂಧಪಟ್ಟವುಗಳನ್ನು ಹೆಚ್ಚು ಇಷ್ಟಪಡುತ್ತಾರೆ. ವೃದ್ಧಾಪ್ಯ ದಲ್ಲಿ ಯಾವುದೇ ಹೊಸ ಅಭಿರುಚಿಯನ್ನು ಬೆಳೆಸಿಕೊಳ್ಳಲು ಹೋಗದೆ, ತಮ್ಮಲ್ಲಿ ಆಗಲೇ ಮನೆಮಾಡಿಕೊಂಡಿರುವ ಅಭಿ ರುಚಿಗಳಲ್ಲೇ ಕೆಲವಕ್ಕೆ ಹೆಚ್ಚು ಒಲವು ತೋರುತ್ತಾರೆ. ಮೊದಲಿನಂತೆ ಅವರಿಗೆ ಹೆಚ್ಚು ಕಾಲ ಓದುವುದಕ್ಕೂ ಆಗುವು ದಿಲ್ಲ. ಕಣ್ಣಿನ ತೊಂದರೆ ಬಹುದೊಡ್ಡ ಅಡಚಣೆಯಾಗಿರು ತ್ತದೆ.

ಸಾಮಾಜಿಕ ಅಭಿರುಚಿಗಳು : ವ್ಯಕ್ತಿಯು ಹಸುಳೆ ತನದಲ್ಲಿ ಅಸಾಂಗಿಕ ಸ್ಥಿತಿಯಿಂದ ಸಾಂಘಿಕ ಸ್ಥಿತಿಗೇರು ತ್ತಾನೆ. ಮೊಟ್ಟಮೊದಲು ಎರಡು ತಿಂಗಳ ಹಸುಳೆಯು ಮನುಷ್ಯರ ಮಾತನ್ನು ಕೇಳಿದಾಗ ತಲೆ ಎತ್ತುತ್ತದೆ. ದೊಡ್ಡ ವರು ಅದನ್ನು ನೋಡಿ ಮುಗುಳ್ನಕ್ಕಾಗ ತಾನೂ ನಕ್ಕು ತನ್ನ ಪ್ರತಿಕ್ರಿಯೆ ತೋರಿಸುತ್ತದೆ. ಇತರರ ಸಂಗ ಅದಕ್ಕೆ ತೃಪ್ತಿ ಕೊಡುತ್ತದೆ. ಅದು ಬೆಳೆದಂತೆಲ್ಲಾ, ತಂದೆ ತಾಯಿ ಮತ್ತು ಇತರ ಹಸುಳೆಗಳ ಸಾಹಚರ್ಯ ಹೆಚ್ಚು ಹೆಚ್ಚು ಪ್ರಿಯವಾ ಗುತ್ತಾ ಹೋಗುತ್ತದೆ. ಹಸುಳೆಗಳಲ್ಲಿನ ಪರಸ್ಪರ ಸಾಹ ಚರ್ಯ ಆಟದ ಮೂಲಕ ಹೆಚ್ಚುತ್ತಾ ಹೋಗಿ ಪೂರ್ವಬಾಲ್ಯದ ಹಂತದಲ್ಲಿ ಹೆಚ್ಚು ಸಾಮಾಜಿಕ ಮಿಲನದಲ್ಲಿ ಸ್ಪಷ್ಟವಾಗಿ ಅಭಿ ವ್ಯಕ್ತವಾಗುತ್ತದೆ. ಈ ವಯಸ್ಕರಲ್ಲಿ ಸಾಮಾಜಿಕ ಸಾಹ

ಚರ್ಯೆಕ್ಕೆ ಆಟಪಾಠಗಳು ಪ್ರಮುಖ ಮಾಧ್ಯಮಗಳಾಗಿರುತ್ತವೆ.

ಉತ್ತರ ಬಾಲ್ಯದಲ್ಲಿ ತಂಡ ಚಟುವಟಿಕೆಗಳು ಹೆಚ್ಚು ಪ್ರಧಾನವಾಗಿರುತ್ತವೆ. ಈ ವಯಸ್ಸಿನ ಮಕ್ಕಳು ಒಂದಿಲ್ಲ ಒಂದು ಸಾಮಾಜಿಕ ಸಂಘದ ಅಥವಾ ಕ್ರೀಡಾ ತಂಡದ ಅಥವಾ ಸೇವಾ ಸದನದ ಸದಸ್ಯನಾಗಿರುವುದನ್ನು ಕಾಣಬಹುದು. ಆದರೆ ಮುಂದೆ ಹರೆಯದಲ್ಲಿ ಈ ಸಾಮಾಜಿಕ ಚಟುವಟಿಕೆಗಳು ಸ್ವಲ್ಪಮಟ್ಟಿಗೆ ಸ್ಥಗಿತವಾಗಿದ್ದು ತಾರುಣ್ಯದಲ್ಲಿ ಪುನಶ್ಚೇತನ ಪಡೆಯುತ್ತವೆ. ತರುಣ ತರುಣಿಯರಲ್ಲಿ ಹೊಸ ಹೊಸ ರೀತಿಯ ಸಾಮಾಜಿಕ ಚಟುವಟಿಕೆಗಳು ಕಂಡುಬರುತ್ತವೆ. ಪ್ರಧಾನವಾಗಿ ಈ ವಯಸ್ಸಿನ ತರುಣ ತರುಣಿಯರು ಪರಸ್ಪರ ಸಾಹಚರ್ಯವನ್ನು ಹೆಚ್ಚು ಇಷ್ಟಪಡುತ್ತಾರೆ. ಸರಸ ಸಂಭಾಷಣೆಯಲ್ಲಿ ಗಂಟೆಗಟ್ಟಲೆ ಕಳೆಯುವುದು ಅಪರೂಪವೇನಲ್ಲ ಇವರ ಸಂಭಾಷಣೆಯ ಪ್ರಮುಖ ವಿಷಯಗಳೆಂದರೆ, ಅಧ್ಯಾಪಕರು, ವ್ಯಾಸಂಗ, ಚಲನಚಿತ್ರ, ವಿನೋದ ಪ್ರಸಂಗಗಳು ಮತ್ತು ರಾಜಕೀಯ.

ಪ್ರಾಪ್ತ ವಯಸ್ಕರಲ್ಲಿ ಸಾಮಾಜಿಕ ಅಭಿರುಚಿಗಳು ಹೆಚ್ಚು ಸುಪ್ತವಾಗಿ ಉಳಿಯುವ ಸಂಭವವೇ ಹೆಚ್ಚು. ಇದಕ್ಕೆ ಪ್ರಮುಖ ಕಾರಣ ಸಮಯದ ಅಭಾವ. ಹೆಚ್ಚಾಗಿ ಅವಿವಾಹಿತ ಗಂಡಸರು ಹಾಗೂ ಹೆಂಗಸರು ಹೆಚ್ಚು ಸಾಮಾಜಿಕ ಸಾಹಚರ್ಯ ಬಯಸಿ, ಸಾಮಾಜಿಕ ಸೇವಾ ಸಮಾಜಗಳನ್ನೂ,

ಸಂಘ ಸಂಸ್ಥೆಗಳನ್ನೂ ಸ್ಥಾಪಿಸಿ ನಡೆಸಿಕೊಂಡು ಬರುತ್ತಾರೆ. ಈ ವಯಸ್ಕರು ಹೊಸ ಹೊಸ ಸ್ನೇಹಗಳನ್ನು ಬೆಳೆಸಿಕೊಳ್ಳರು. ಅಲ್ಲದೆ ಪರಸ್ಪರ ಭೇಟಿಯ ವಿರಳತೆಯಿಂದಾಗಿ ಹಿಂದಿನ ಸ್ನೇಹ ಸಂಬಂಧಗಳೂ, ಬಾಂಧವ್ಯಗಳೂ ಸಡಿಲವಾಗುವ ಸಾಧ್ಯತೆಯೇ ಹೆಚ್ಚು.

ಮಧ್ಯಮ ವಯಸ್ಕರಲ್ಲಿ, ಔದ್ಯೋಗಿಕ ಜಯ ಮತ್ತು ಸಂತೃಪ್ತಿಗಳನ್ನು ಪಡೆದು ಸಮಾಜದಲ್ಲಿ ಪ್ರತಿಷ್ಠಿತರೆನಿಸಿಕೊಂಡ ಗಂಡಸರೂ, ಮನೆಗೆಲಸದಿಂದ ಸಾಪೇಕ್ಷವಾಗಿ ವಿಮುಕ್ತಿ ಪಡೆದ ಹೆಂಗಸರೂ, ಹೆಚ್ಚು ಸಾಮಾಜಿಕ ಸಾಹಚರ್ಯದಲ್ಲಿ ತೊಡಗುತ್ತಾರೆ. ನಲವತ್ತರ ಅವಧಿಯಲ್ಲಿ ಸಮುದಾಯ ಚಟುವಟಿಕೆಗಳು ಹೆಚ್ಚಾಗಿ ಕಂಡುಬರುತ್ತವೆ.

ಮುಂದೆ, ವಯಸ್ಸು ಹೆಚ್ಚಿದಂತೆಲ್ಲಾ ಸಾಮಾಜಿಕ ಚಟುವಟಿಕೆಗಳು ಕಡಿಮೆಯಾಗುತ್ತಾ ಬರುತ್ತವೆ. ಇದಕ್ಕೆ ಹಲವು ಕಾರಣಗಳುಂಟು. ಅವುಗಳಲ್ಲಿ ಕುಂದುತ್ತಿರುವ ದೈಹಿಕ ಮತ್ತು ಮಾನಸಿಕ ಶಕ್ತಿ ಸಾಮರ್ಥ್ಯಗಳು ಪ್ರಮುಖ. ಅಲ್ಲದೆ, ಸಮ ವಯಸ್ಕರ ಅಭಾವ, ಬಾಳ ಸಂಗಾತಿ ಮತ್ತು ಆತ್ಮೀಯ ಬಂಧುಮಿತ್ರರ ಮರಣ ಇವುಗಳೂ ಅಡಚಣೆಗಳೂ ವೃದ್ಧರ ಸಾಮಾಜಿಕ ಸಾಹಚರ್ಯಕ್ಕೆ ಸುಲಭವಾಗಿ ದೊರೆಯುವ ವ್ಯಕ್ತಿಗಳೆಂದರೆ, ಕುಟುಂಬದ ಸದಸ್ಯರು, ಅದರಲ್ಲಿಯೂ ಮೊಮ್ಮಕ್ಕಳು ಮತ್ತು ಮನೆಗೆ ಬರುವ ಬಂಧುಗಳು. ವೃದ್ಧ ಹೆಂಗಸರಿಗೆ ಗಂಡಸರಿಗಿಂತ ಹೆಚ್ಚು ಸಾಮಾಜಿಕ ಅಭಿ

ುಚಿಯಿರುತ್ತದೆ. ಅವರು ತಮಗೆ ಸಿಗುವ ಅವಕಾಶಗಳನ್ನೇ ುತ್ತಮವಾಗಿ ಬೆಳೆಸಿಕೊಂಡು ಬಂಧು-ಬಾಂಧವರೊಡನೆ ೆರೆತು ಹರ್ಷಿಸಬಲ್ಲರು.

ಧಾರ್ಮಿಕ ಅಭಿರುಚಿಗಳು : ಧಾರ್ಮಿಕ ಭಾವನೆಯು ್ಯಕ್ತಿಯಲ್ಲಿ ಯಾವಾಗ ಅಂಕುರಿಸುತ್ತದೆ, ಹೇಳುವದು ಕಷ್ಟ. ಅವನು ಹುಟ್ಟಿ ಬೆಳೆಯುವ ಸಾಮಾಜಿಕ ಪರಿಸರ ಬಹು ುಟ್ಟಿಗೆ ಈ ಅಭಿರುಚಿಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಾಲ್ಯದಲ್ಲಿ ತಂದೆ ತಾಯಿ ಹಾಗೂ ಬಂಧು-ಬಳಗದವರು ತೋರುವ ಧಾರ್ಮಿಕ ರೀತಿನೀತಿಗಳು ಮಕ್ಕಳ ಮೇಲೆ ಕೆಲವು ವೇಳೆ ಅಳಿಸಲಾರದಂತಹ ಪ್ರಭಾವ ಬೀರಬಲ್ಲವು. ದೇವರು, ಸ್ವರ್ಗ-ನರಕ, ಪಾಪ-ಪುಣ್ಯ ಮುಂತಾದ ವಿಷಯಗಳ ಬಗ್ಗೆ ಮಕ್ಕಳು ಅಂಧಶ್ರದ್ಧೆಯನ್ನು ಹೊಂದಿರುವುದು ಅಪರೂಪ ವಲ್ಲ. ಆದರೆ ಅವರು ಬೆಳೆದಂತೆಲ್ಲಾ, ಅನುಭವ ಹೆಚ್ಚಿ, ಜೀವನ ಕ್ಷೇತ್ರ ವಿಸ್ತಾರವಾಗಿ, ಶಿಕ್ಷಣ ಮುಂದುವರಿದಂತೆಲ್ಲಾ, ಆ ಅಂಧಶ್ರದ್ಧೆಗಳು ಅಲುಗ ತೊಡಗುತ್ತವೆ. ಪೂರ್ವತಾರುಣ್ಯ ತಲುಪುವ ವೇಳೆಗಾಗಲೇ, ಅವರಲ್ಲಿ ತಮ್ಮ ಧಾರ್ಮಿಕ ನಂಬಿಕೆ ಗಳ ಬಗ್ಗೆ ವಿಚಾರಮಾಡುವ ಪ್ರವೃತ್ತಿ ಬೆಳೆದಿರುತ್ತದೆ. ಜೀವನ-ಮರಣ, ಮರಣೋತ್ತರ ಸ್ಥಿತಿ ಮುಂತಾದವುಗಳ ಬಗ್ಗೆ ನವತರುಣ ತರುಣಿಯರು ಸಾಕಷ್ಟು ಚರ್ಚೆ ನಡೆಸುವು ದುಂಟು. ಅಂತಹ ಚರ್ಚೆಗಳು ಅವರ ಓರಗೆಯವರೊಂದಿಗೆ ಮಾತ್ರವಲ್ಲದೆ, ತಂದೆ ತಾಯಿಗಳು, ಗುರುಹಿರಿಯರು ಹಾಗೂ ಕೆಲವುವೇಳೆ ಧರ್ಮಗುರುಗಳೊಂದಿಗೂ ನಡೆಯು

ತ್ತವೆ. ಚರ್ಚಾಪ್ರವೃತ್ತಿ ಮುಂದುವರಿದರೆ, ಆ ವರೆಗೆ ನ
ನಿಂತಿದ್ದ ನಂಬಿಕೆಗಳು ಬುಡಮೇಲಾಗಬಹುದು, ಅಥ
ಬಲವಾಗಬಹುದು ಅಥವಾ ಅವುಗಳ ಸ್ಥಾನದಲ್ಲಿ ಹೊಸ ಹೊ
ನಂಬಿಕೆಗಳು ಮೂಡಬಹುದು. ಕೆಲವು ನಂಬಿಕೆಗಳ ಬ
ಶಂಕೆಗೆ ಸೂಕ್ತ ಸಮಾಧಾನ ಸಿಗದಾಗ ಈ ವಯಸ್ಕ
ಭಾವಕರ್ಷಣೆಯಿಂದ ನರಳುವುದೂ ಉಂಟು.

ಧಾರ್ಮಿಕ ನಂಬಿಕೆಗಳ ಬಗ್ಗೆ ಶಂಕೆಯಿರುವುದು ಬೆ
ಯುತ್ತಿರುವ ವ್ಯಕ್ತಿಗೆ ಒಂದು ದೃಷ್ಟಿಯಿಂದ ಶ್ರೇಯಸ್ಕ
ವೆಂದು ಹೇಳಬಹುದು. ಅಂತಹ ಶಂಕೆ ಮೂಡದಿದ್ದಲ್ಲಿ
ಅನೇಕ ವೇಳೆ, ವ್ಯಕ್ತಿಯ ಜೀವನಾದ್ಯಂತ ಅಂಧಶ್ರದ್ಧೆಗಳ
ಮನೆಮಾಡಿಕೊಂಡು ದುಃಖಕೊಡುವ ಸಾಧ್ಯತೆಯೇ ಹೆಚ್ಚು
ಹೇಗಾದರೂ, ಉತ್ತರ ತಾರುಣ್ಯದ ಕೊನೆಯ ವೇಳೆ
ಧಾರ್ಮಿಕ ಶಂಕೆಗಳ ತೀವ್ರತೆ ಸ್ವಲ್ಪ ಕಡಿಮೆಯಾಗುವುದನ
ಕಾಣಬಹುದು. ಈ ವಯಸ್ಸಿನ ತರುಣ ತರುಣಿಯರ ಸಾಮ
ಜಿಕ ಸಂಪರ್ಕಗಳು ವಿಶಾಲವಾದಂತೆಲ್ಲಾ, ಧಾರ್ಮಿಕ ಸಮಸ
ಗಳನ್ನು ಹೆಚ್ಚು ಹೆಚ್ಚು ವಸ್ತುನಿಷ್ಠ ರೀತಿಯಿಂದ ನೋಡು
ಮನೋಭಾವ ಬೆಳೆಯುತ್ತದೆಯಲ್ಲದೆ ಪರಧರ್ಮ ಸಹಿಷ
ತೆಯೂ ಹೆಚ್ಚುತ್ತದೆ. ವಿವಿಧ ಜನರೊಂದಿಗೆ ಚರ್ಚಿಸಿದಾಗ
ಈ ವಯಸ್ಕರ ಕೆಲವು ಶಂಕೆಗಳಿಗೆ ಪರಿಹಾರ ಸಿಗುವ ಸಾಧ್ಯ
ಇದೆ. ದೇವರು, ಸ್ವರ್ಗವಾಸಿಗಳು, ಭೂತಪ್ರೇತಗಳ
ಪವಾಡಗಳು, ಮರಣೋತ್ತರ ಜೀವನ ಅಥವಾ ಪುನರ್ಜನ
ಮುಂತಾದ ವಿಷಯಗಳ ಬಗೆಗಿನ ನಂಬಿಕೆಗಳಲ್ಲಿ ಗಣನೀಯ
ಬದಲಾವಣೆಗಳು ಕಂಡುಬರುತ್ತವೆ. ಉನ್ನತ ವಿದ್ಯಾಭ್ಯಾ

ಮಾಡುತ್ತಿರುವ ತರುಣ ತರುಣಿಯರಲ್ಲಿ ಮೇಲ್ಕಂಡ ನಂಬಿಕೆಗಳು ಅಷ್ಟಾಗಿ ನೆಲೆ ನಿಂತಿರುವುದಿಲ್ಲ. ಆದರೂ ಚಿಕ್ಕಂದಿನಲ್ಲಿ ತಂದೆ ತಾಯಿಗಳು ಹೆಚ್ಚು ಪ್ರಗತಿಪರ ಭಾವನೆಗಳನ್ನು ಬೆಳೆಸಿದ್ದರೆ, ಈ ವಯಸ್ಕರು ಮತಧರ್ಮಗಳ ಬಗ್ಗೆ ಹೆಚ್ಚು ಪರಿಪಕ್ವ ಅಭಿರುಚಿಗಳನ್ನು ಬೆಳೆಸಿಕೊಳ್ಳಬಲ್ಲರು.

ಪ್ರಾಪ್ತವಯಸ್ಕರು ತಮ್ಮ ಉದ್ಯೋಗದಲ್ಲೇ ಹೆಚ್ಚು ಕಾಲ ನಿರತರಾಗುವುದರಿಂದ ಧಾರ್ಮಿಕ ಚಟುವಟಿಕೆಗಳಿಗೆ ಅಷ್ಟಾಗಿ ಗಮನ ಕೊಡುವುದಿಲ್ಲ. ಆದರೆ ಔದ್ಯೋಗಿಕ ಜೀವನದಲ್ಲಿ ಹೆಚ್ಚು ಹೆಚ್ಚು ಸ್ಥಿರತೆ ಕಂಡುಬಂದ ಅನಂತರ, ಅವರ ಗಮನ ಧಾರ್ಮಿಕ ಚಟುವಟಿಕೆಗಳತ್ತ ಹರಿಯುವ ಸಾಧ್ಯತೆ ಇದೆ. ಮೂವತ್ತು ಮೂವತ್ತೈದು ವರ್ಷ ವಯಸ್ಸಿನವರಲ್ಲಿ ಕೆಲವರು ತಮ್ಮ ಧಾರ್ಮಿಕ ಅಭಿರುಚಿಗಳನ್ನು ಪ್ರಕಟವಾಗಿ ತೋರಿಸುವುದನ್ನು ಕಾಣಬಹುದು. ಬರುಬರುತ್ತಾ ಈ ಅಭಿರುಚಿಗಳು ಹೆಚ್ಚು ಹೆಚ್ಚು ಗಾಢವಾಗುತ್ತಾ ಮುಂದೆ ಮಧ್ಯಮ ವಯಸ್ಸಿನ ವೇಳೆಗೆ ಹೆಚ್ಚು ಸ್ಥಿರವಾಗುತ್ತವೆ. ಮಧ್ಯಮ ವಯಸ್ಕರು ಸಂಸಾರ ತಾಪತ್ರಯಗಳಿಗೆ ಹೆಚ್ಚು ಹೊಂದಿಕೊಂಡಿರುವುದೇ ಇದಕ್ಕೆ ಪ್ರಮುಖ ಕಾರಣ. ಈ ವಯಸ್ಕರನ್ನು ಧಾರ್ಮಿಕ ಶಂಕೆಗಳು ಅಷ್ಟಾಗಿ ಕಾಡುವುದಿಲ್ಲ. ಅಲ್ಲದೆ ಮೂಢನಂಬಿಕೆಗಳೂ ಬಹುಮಟ್ಟಿಗೆ ಕಡಿಮೆಯಾಗುತ್ತವೆ.

ಮಧ್ಯಮ ವಯಸ್ಸಿನಲ್ಲಿ ಕಂಡುಬಂದ ಧಾರ್ಮಿಕ ಅಭಿರುಚಿಗಳು ಬಹುಮಟ್ಟಿಗೆ ವೃದ್ಧಾಪ್ಯದಲ್ಲಿ ಮುಂದುವರಿಯು

ತ್ತವೆ. ಸ್ವಧರ್ಮ ನಿಷ್ಠೆ ಹೆಚ್ಚಾಗುವುದರ ಜೊತೆಗೆ, ಪರಧ
ಸಹಿಷ್ಣುತೆಯೂ ಹೆಚ್ಚುತ್ತದೆ. ಮೊದಮೊದಲ ವರ್ಷ
ಧಾರ್ಮಿಕ ಭಾವನೆ ಹೊಂದಿರದಿದ್ದವರೂ ಕೂಡ, ಈ
ಸ್ಸಿನಲ್ಲಿ ಧಾರ್ಮಿಕ ಚಟುವಟಿಕೆಗಳ ಬಗ್ಗೆ ಹೆಚ್ಚು ಆಸ್ಥೆ
ಸುವುದನ್ನು ಕಾಣಬಹುದು. ಮರಣವು ಜೀವನದ ಅ
ವೆಂದು ಹಿಂದೆ ವಾದ ಮಾಡುತ್ತಿದ್ದವರಲ್ಲೂ ಕೆಲವರು,
ಣವು ಮರಣೋತ್ತರ ಜೀವನದ ಆರಂಭ ಎಂಬ ನಂ
ಯನ್ನು ವೃದ್ಧಾಪ್ಯದಲ್ಲಿ ಬೆಳೆಸಿಕೊಳ್ಳುತ್ತಾರೆ. ಈ ವಂ
ರಲ್ಲಿ ಕಂಡುಬರುವ ಸಾಮಾನ್ಯ ಧಾರ್ಮಿಕ ಚಟುವಟಿಕೆ
ದರೆ, ಪೂಜೆ-ಪ್ರಾರ್ಥನೆ, ಪುರಾಣ-ಪುಣ್ಯಕತೆ ಮತ್ತು ಧಾರ್ಮಿ
ಪ್ರವಚನಗಳನ್ನು ಕೇಳುವುದು. ಇಂತಹ ಚಟುವಟಿಕೆ
ಗಂಡಸರಿಗಿಂತ ಹೆಂಗಸರಲ್ಲಿ ಹೆಚ್ಚು. ವೃದ್ಧರಲ್ಲಿ ಕ
ಬರುವ ಅಧಿಕ ಧಾರ್ಮಿಕ ಒಲವು ಅವರ ಸಾಂಘಿಕ
ಚರ್ಯದ ಅಗತ್ಯವನ್ನು ಸ್ವಲ್ಪಮಟ್ಟಿಗೆ ಪೂರ್ಣಗೊ
ಬಲ್ಲದು.

ಒಟ್ಟಿನಲ್ಲಿ, ಧಾರ್ಮಿಕ ಅಭಿರುಚಿಗಳು, ಬಾಲ್ಯ
ಅಂಕುರಿಸಿ, ಯೌವನ ಮತ್ತು ಪ್ರೌಢಾವಸ್ಥೆಗಳಲ್ಲಿ
ಮಟ್ಟಿಗೆ ಅಂತರ್ವಾಹಿನಿಯಂತಿದ್ದು, ವೃದ್ಧಾಪ್ಯದಲ್ಲಿ ಹ
ಪ್ರಕಟವಾಗುತ್ತವೆ ಎಂದು ಹೇಳಬಹುದು. ಈ ಅಭಿ
ಗಳು ಜೀವನದ ಹೊಂದಾಣಿಕೆಗೆ ಅತ್ಯಗತ್ಯವೆನಿಸದಿದ್ದ
ವ್ಯಕ್ತಿಯ ಸಂತೋಷ ಮತ್ತು ಸುರಕ್ಷಿತ ಭಾವನೆಗಳ
ಹೆಚ್ಚಿಸುವುದರಿಂದ ಒಂದು ದೃಷ್ಟಿಯಲ್ಲಿ ಧಾರ್ಮಿಕ ಪರಿಪ

ಅಗತ್ಯವೆನಿಸಬಲ್ಲದು. ಧಾರ್ಮಿಕವಾಗಿ ಹೆಚ್ಚು ಪರಿಪಕ್ವನಾದ ವ್ಯಕ್ತಿಯು ನಡೆಸುವ ಪೂಜೆ, ಪ್ರಾರ್ಥನೆ ಮುಂತಾದ ಕ್ರಿಯೆಗಳು ಯಾವ ಭಯದಿಂದಲೂ ಪ್ರೇರಿತವಾಗಿರದೆ, ಚಿತ್ತಶಾಂತಿಯ ನಿಮಿತ್ತವಾಗಿರುತ್ತವೆ. ವೃದ್ಧಾಪ್ಯದಲ್ಲಂತೂ ಅಂತಹ ಕ್ರಿಯೆಗಳು ಜೀವನದ ಹೊಂದಾಣಿಕೆಗೆ ಅತ್ಯಮೂಲ್ಯವೆನಿಸುವ ಸಾಧ್ಯತೆಯೇ ಹೆಚ್ಚು.

ಉದ್ಯೋಗಾಭಿರುಚಿಗಳು : ಉದ್ಯೋಗಾಭಿರುಚಿಗಳ ಉಗಮದ ಬಗ್ಗೆ ನಿಖರವಾಗಿ ಏನನ್ನೂ ಹೇಳಲಾಗುವುದಿಲ್ಲ. ವ್ಯಕ್ತಿಯ ಜೀವಿತದಾದ್ಯಂತ ಈ ಅಭಿರುಚಿಗಳು ವಿಕಾಸ ಹೊಂದುತ್ತವೆ ಎಂಬುದು ಗಮನಿಸಬೇಕಾದ ಅಂಶ. ಆತನ ಶಕ್ತಿ-ಸಾಮರ್ಥ್ಯ, ಆಶೆ-ಆಶೋತ್ತರ, ಸಮಾಜದಲ್ಲಿ ಪ್ರಚಲಿತವಿರುವ ಔದ್ಯೋಗಿಕ ರೀತಿನೀತಿಗಳು ಹಾಗೂ ಅವಕಾಶಗಳು ಉದ್ಯೋಗಾಭಿರುಚಿಗಳ ಬೆಳವಣಿಗೆಯನ್ನು ಬಹುಮಟ್ಟಿಗೆ ನಿರ್ಧರಿಸುತ್ತವೆ.

ಈ ಅಭಿರುಚಿಗಳು ವ್ಯಕ್ತಿಯಲ್ಲಿ ಸ್ವಲ್ಪಮಟ್ಟಿಗೆ ಪ್ರಕಟಗೊಳ್ಳುವುದು ಉತ್ತರ ಬಾಲ್ಯದಲ್ಲಿ. ಅಂದರೆ ಸುಮಾರು ೮ ರಿಂದ ೧೨ ವರ್ಷ ವಯಸ್ಸಿನಲ್ಲಿ. ಈ ವಯಸ್ಸಿನ ಕೆಲವು ಮಕ್ಕಳು ತಮಗೆ ಗೊತ್ತಿರುವ ಕೆಲವು ಉದ್ಯೋಗಗಳಲ್ಲಿ ಅಭಿರುಚಿ ಪ್ರಕಟಿಸುವುದುಂಟು. ಬಹುಮಟ್ಟಿಗೆ ಅಂತಹ ಅಭಿರುಚಿಯು ಕಲ್ಪನಾವಿಲಾಸದಿಂದ ಮೂಡಿಬರುತ್ತದೆ. ಅವರು ತಾವು ತಮ್ಮ ಸುತ್ತಮುತ್ತ ಕಂಡು ಕೇಳಿದ ಉದ್ಯೋಗಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚು ಉದ್ಯೋಗಗಳ

ಬಗ್ಗೆ ಹೆಚ್ಚು ಒಲವನ್ನು ತೋರಿಸುತ್ತಾರೆ. ಅವರ ಕಲ್ಪನೆಯಲ್ಲಿ ಅಂತಹ ಉದ್ಯೋಗಗಳು ತೃಪ್ತಿದಾಯಿಗಳಾಗಿರುತ್ತವೆ. ತಮ್ಮ ತಂದೆ (ಸ್ವಲ್ಪಮಟ್ಟಿಗೆ ತಾಯಿ), ಸಮೀಪ ಬಂಧುಗಳು ಅಥವಾ ತಮ್ಮ ಗೌರವಾದರಕ್ಕೆ ಪಾತ್ರರಾದವರು ನಿರತರಾಗಿರುವ ಉದ್ಯೋಗಗಳನ್ನು ಈ ವಯಸ್ಕರು ಹೆಚ್ಚು ಇಷ್ಟಪಡುತ್ತಾರೆ. ಅಂತಹ ಉದ್ಯೋಗಗಳನ್ನು ಮಾಡಲು ತಾವು ಸಮರ್ಥರೇ ಅಥವಾ ಅವು ತಮಗೆ ದೊರೆಯುತ್ತವೆಯೇ ಎಂಬ ಪ್ರಶ್ನೆಗಳು ಅವರನ್ನು ಕಾಡಿಸವು. ಆದಾಗ್ಯೂ, ಮುಂದೆ ತಾರುಣ್ಯದಲ್ಲಿ ಅವರು ಮಾಡಲಿರುವ ವೃತ್ಯಾಯ್ಕೆ ಹಾಗೂ ವೃತ್ತಿ ಹೊಂದಾಣಿಕೆಗಳ ಮೇಲೆ ಈ ಚಿಕ್ಕಂದಿನ ಒಲವುಗಳು ಗಣನೀಯ ಪರಿಣಾಮ ಬೀರಬಲ್ಲವು.

ಪೂರ್ವತಾರುಣ್ಯದಲ್ಲಿ, ವ್ಯಕ್ತಿಗೆ ತನ್ನ ಉಪಜೀವಿಕೆಯ ಬಗ್ಗೆ ಸ್ವಲ್ಪಮಟ್ಟಿಗೆ ಚಿಂತೆ ತಲೆದೋರುತ್ತದೆ. ಆಗ ಆತನು ಉದ್ಯೋಗ ವಿಚಾರಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸುವುದನ್ನು ಕಾಣಬಹುದು. ಆತನ ಶಕ್ತಿ ಸಾಮರ್ಥ್ಯಗಳು, ಕುಟುಂಬದ ಸಾಮಾಜಿಕ ಆರ್ಥಿಕ ಅಂತಸ್ತು ಮುಂತಾದ ಕಾರಕಗಳು ಉದ್ಯೋಗದ ಬಗೆಗೆ ಅವನು ಮಾಡುವ ಚಿಂತನೆಯ ಮೇಲೆ ಪ್ರಭಾವ ಬೀರುತ್ತವೆ. ಉದಾಹರಣೆಗೆ, ನಮ್ಮ ಸಮಾಜದಲ್ಲಿ ಮಧ್ಯಮ ವರ್ಗ (?) ಕ್ಕೆ ಸೇರಿದವರೆನಿಸುವ ತರುಣ ತರುಣಿಯರಿಗೆ ಉದ್ಯೋಗದ ಬಗ್ಗೆ ಚಿಂತನೆ ಮಾಡಲು ಹೆಚ್ಚು ಪ್ರೋತ್ಸಾಹ ಸಿಗುತ್ತದೆ. ಅಂತಹ ಪ್ರೋತ್ಸಾಹ ತರುಣಿಯರಿಗಿಂತ ತರುಣರಿಗೆ ಹೆಚ್ಚು ದೊರೆಯುತ್ತದೆ. ಕೆಲವು ತರುಣ

ತರುಣಿಯರ ಉದ್ಯೋಗಾಭಿರುಚಿಗಳು ಅವರವರ ಕುಟುಂಬಗಳ ಔದ್ಯೋಗಿಕ ಸ್ಥಾನಮಾನಗಳಿಗೆ ಅನುಗುಣವಾಗಿದ್ದರೆ, ಉಳಿದವರ ಅಭಿರುಚಿಗಳು ಅವಕ್ಕೆ ತೀರಾ ಭಿನ್ನವಾಗಿರುತ್ತವೆ. ಈ ವಯಸ್ಸಿನಲ್ಲಿ ಆಗುವ ಉದ್ಯೋಗಾಯ್ಕೆಗಳು ಸಾಮಾನ್ಯವಾಗಿ, ಹೆಚ್ಚು ತಾತ್ಕಾಲಿಕವೆನಿಸುತ್ತವೆ. ಅವು ಸ್ಥಿರವಾಗುಳಿಯಲು ವ್ಯಕ್ತಿಯ ಶಕ್ತಿ ಸಾಮರ್ಥ್ಯಗಳು, ವಿದ್ಯಾಮಟ್ಟ, ತರಬೇತಿ, ಉದ್ಯೋಗಾವಕಾಶಗಳು ಮತ್ತು ಪ್ರಭಾವ ಬೀರುವ ಶಕ್ತಿ ಇವು ಬಹು ಮುಖ್ಯ. ಈ ವಯಸ್ಸಿನ ತರುಣರು ಸಾಮಾನ್ಯವಾಗಿ ತಮಗೆ ಸಮಾಜದಲ್ಲಿ ಹೆಚ್ಚು ಸ್ಥಾನಮಾನ ಕೊಡುವ (ಅವರ ದೃಷ್ಟಿಯಲ್ಲಿ) ಹಾಗೂ ಸಾಹಸಮಯ ಉದ್ಯೋಗಗಳನ್ನೂ, ತರುಣಿಯರು ಹೆಚ್ಚು ಸುರಕ್ಷಿತವೆನಿಸುವ ಉದ್ಯೋಗಗಳನ್ನು ಹೆಚ್ಚು ಇಷ್ಟಪಡುತ್ತಾರೆ.

ಉತ್ತರ ತಾರುಣ್ಯದಲ್ಲಿ, ಈ ವೇಳೆಗಾಗಲೇ ರೂಪಗೊಂಡಿರುವ ಉದ್ಯೋಗಾಭಿರುಚಿಗಳು ಹೆಚ್ಚು ಸ್ಥಿರವಾಗತೊಡಗಿ, ಸಾಪೇಕ್ಷವಾಗಿ ಹೆಚ್ಚು ವಾಸ್ತವಿಕವೆನಿಸಬಹುದಾದ ಉದ್ಯೋಗಾಯ್ಕೆಗಳಿಗೆ ನೆರವಾಗಬಲ್ಲವು. ಈ ವಯಸ್ಕರಿಗೆ, ತಮ್ಮ ಜೀವನರಂಗದ ವಾಸ್ತವಿಕ ಸ್ಥಿತಿಗತಿಗಳ ಪರಿವೆ ಹೆಚ್ಚುವುದೇ ಅವರ ಉದ್ಯೋಗಾಯ್ಕೆಯು ಹೆಚ್ಚು ವಾಸ್ತವಿಕವೆನಿಸಲು ಪ್ರಧಾನ ಕಾರಣ. ತರುಣರು ಹೆಚ್ಚಾಗಿ ಸ್ವಾತಂತ್ರ್ಯ, ಅಧಿಕಾರ ಮತ್ತು ಭದ್ರತೆಗಳಿಂದ ಕೂಡಿ ಸಮಾಜದಲ್ಲಿ ಘನತೆ ಗೌರವಗಳನ್ನು ತಂದುಕೊಡುವಂತಹ ಉದ್ಯೋಗಗಳತ್ತ ಹೆಚ್ಚು ಆಕರ್ಷಿತರಾಗುತ್ತಾರೆ. ಈ ವಯಸ್ಕರಿಗೆ, ಅವರವರ

ಅಭಿರುಚಿಗೆ ಅನುಗುಣವಾದ ಉದ್ಯೋಗ ದೊರೆತಲ್ಲಿ, ಅವರ ಉದ್ಯೋಗಾಭಿರುಚಿಯು ಸಾಪೇಕ್ಷವಾಗಿ ಹೆಚ್ಚು ಶಾಶ್ವತವಾಗಿರುವ ಸಾಧ್ಯತೆ ಹೆಚ್ಚು. ಆದರೆ ತಮಗೆ ವಾಸ್ತವವಾಗಿ ಯಾವ ಉದ್ಯೋಗದಲ್ಲಿ ಅಭಿರುಚಿ ಹೆಚ್ಚು ಎಂಬುದನ್ನು ಗುರುತಿಸುವುದು ಅವರಿಗಾಗಲೀ, ಇತರರಿಗಾಗಲೀ ಅಷ್ಟು ಸುಲಭಸಾಧ್ಯವಲ್ಲ. ಒಂದು ಪಕ್ಷ ವಸ್ತುನಿಷ್ಠವಾಗಿ ಅಭಿರುಚಿಯನ್ನು ಗುರುತಿಸಲು ಅನುಕೂಲವಾಗುವುದಾದರೆ ಅದರಿಂದ ಆಗುವ ಪ್ರಯೋಜನ ಅಪಾರ.

ಪ್ರೌಢ ವಯಸ್ಸಿನಲ್ಲಿ ಉದ್ಯೋಗಾಭಿರುಚಿಗಳು ಸ್ಥಿರವಾಗಿರುತ್ತವೆ. ಆದರೆ ವಯಸ್ಸು ಮತ್ತು ವಾಸ್ತವಿಕ ಅನುಭವ ಹೆಚ್ಚಿದಂತೆ ಅವುಗಳಲ್ಲಿ ಕೆಲವು ಮಾರ್ಪಾಡುಗಳಾಗುವ ಸಾಧ್ಯತೆ ಇಲ್ಲದಿಲ್ಲ. ಕೆಲವರಲ್ಲಿ ಅಂತಹ ಪರಿವರ್ತನೆ ಗಣನೀಯ ಪ್ರಮಾಣದ್ದಾಗಿರಬಹುದು. ಉದಾಹರಣೆಗೆ, ಯುವಕನೊಬ್ಬ ತಪ್ಪು ಕಲ್ಪನೆಯಿಂದ ತನಗೆ ವೈಜ್ಞಾನಿಕ ಅಭಿರುಚಿಯಿದೆ ಎಂದು ತಿಳಿದು, ಅದಕ್ಕೆ ಸರಿಯಾದ ಉದ್ಯೋಗವನ್ನು ಆರಿಸಿಕೊಂಡು, ತನ್ನ ಸಾಮರ್ಥ್ಯ ಮತ್ತು ಪರಿಶ್ರಮಗಳ ಫಲವಾಗಿ ಅದರಲ್ಲಿ ಜಯಶಾಲಿಯಾಗಬಹುದು. ಆದರೆ ಅದರಿಂದ ಅಷ್ಟಾಗಿ ಸಂತೃಪ್ತಿ ಸಿಗದಾಗ, ಅವನ ನೈಜ ಅಭಿರುಚಿ ಪ್ರಕಟವಾಗಬಹುದು. ಲಲಿತಕಲೆಯೊಂದರಲ್ಲಿ ತೀವ್ರ ಆಸಕ್ತಿಯಿರುವುದು ಆತನಿಗೆ ಮನವರಿಕೆಯಾದಮೇಲೆ, ತನ್ನ ದಿನದ ಹೆಚ್ಚು ಸಮಯವನ್ನು ವಿಜ್ಞಾನಕ್ಕೆ ಬದಲಾಗಿ ಕಲಾ ಕೃಷಿಗೆ ಬಳಸಲು ಪ್ರಾರಂಭಿಸಬಹುದು. ಕೆಲವುವೇಳೆ, ಒಂದು

ದ್ಯೋಗದಲ್ಲಿ ಅನೇಕ ವರ್ಷಗಳು ಕಳೆದಮೇಲೆ, ಆ ದ್ಯೋಗದಲ್ಲಿ ತನಗೆ ಅಭಿರುಚಿ ಇಲ್ಲವೆಂದು ಅರಿತಾಗ, ತನ್ನ ವನದಲ್ಲಿ ಅಷ್ಟು ವರ್ಷಗಳು ನಿರರ್ಥಕವಾದವು ಎಂದು ಕ್ತಿಯು ಭಾವಿಸುವ ಸಾಧ್ಯತೆಯೂ ಉಂಟು.

ಸಾರ್ವಜನಿಕ ಸೇವೆಯಲ್ಲಿದ್ದವರು ನಿವೃತ್ತರಾದ ಾಡಲೇ, ನಮ್ಮ ಸಮಾಜದಲ್ಲಿ ಅವರ ಉದ್ಯೋಗ ಜೀವನಕ್ಕೆ ಂತಿ ಮಂತ್ರ ಹೇಳಿದಂತೆಯೇ. ಆದರೆ ಸತ್ಯಸ್ಥಿತಿ ಬೇರೆಯೇ ದೆ. ಉದ್ಯೋಗಾಭಿರುಚಿಯು, ನಿವೃತ್ತಿಯಾದಕೂಡಲೇ, ವಕಾಶದ ಅಭಾವದಿಂದ ವ್ಯಕ್ತಿಯಲ್ಲಿ ಮುರುಟಬಹುದೇ ೂರತು ನಾಶವಾಗುವುದಿಲ್ಲವೆಂಬುದು ಅನುಭವಿಕ ಸತ್ಯ. ವಕಾಶ ಸಿಕ್ಕರೆ ವೃದ್ಧರೂ ಕೂಡ ತಮ್ಮ ಉಳಿದಿರುವ ಶಕ್ತಿ ಮರ್ಥ್ಯಗಳು ಮತ್ತು ತಾವು ಗಳಿಸಿಕೊಂಡಿರುವ ಅನುಭವ ಂಪತ್ತುಗಳ ಲಾಭ ಪಡೆದು, ತಮ್ಮ ಅಭಿರುಚಿಗನುಗುಣವಾದ ತ್ತಿಯಲ್ಲಿ ಸಾರ್ಥಕ ಸೇವೆ ಸಲ್ಲಿಸಬಲ್ಲರು. ಅಷ್ಟಲ್ಲದೆ, ಗತ್ಯಬಿದ್ದರೆ, ತಮ್ಮ ಅಭಿರುಚಿಗಳಲ್ಲಿ ಸಾಧ್ಯವಿದ್ದಷ್ಟು ಾರ್ಪಾಡುಗಳನ್ನು ಮಾಡಿಕೊಂಡು ವೃತ್ತಿ ಜೀವನವನ್ನು ಗಿಸಬಲ್ಲರು. ಅಂದಮೇಲೆ ವೃದ್ಧಾಪ್ಯದಲ್ಲಿಯೂ ಯಾವು ಾದರೂ ಉಪಯುಕ್ತ ಕಾರ್ಯದಲ್ಲಿ ತೊಡಗಿದಾಗಲೇ ವ್ಯಕ್ತಿ ುಲ್ಲಿ ಸಾರ್ಥಕತಾ ಭಾವನೆ ತುಂಬಿರಬಲ್ಲದು ಎಂದಾಗ ಕಾಯಕವೇ ಕೈಲಾಸ" ಎಂಬ ತತ್ತ್ವದ ಆಂತರ್ಯ ಸೂಚ್ಯ ಗಿಯಾದರೂ ನಮಗೆ ಗೋಚರಿಸದಿರದು.

ಉದ್ಯೋಗಾಭಿರುಚಿಗಳು ವ್ಯಕ್ತಿಯ ಜೀವಿತದಾವ ಕ್ರಿಯಾಶೀಲವಾಗಿರಬಲ್ಲವು ಎಂಬ ಅಂಶವನ್ನು ಯಾ ಮರೆಯಲಾಗದು. ಆದರೆ ಅವುಗಳ ಸ್ಥಿರತೆಯಲ್ಲಿ ಸಾ ಪರಿವರ್ತನೆಗಳಾಗುವುದನ್ನು ಅನೇಕ ಮಂದಿ ಸಂಶೋಧ ಕಂಡುಹಿಡಿದಿದ್ದಾರೆ. ಪಾಶ್ಚಿಮಾತ್ಯ ಸಂಶೋಧಕರ ಅಂಶಗಳ ಪ್ರಕಾರ, ಅಭಿರುಚಿಗಳು ಉತ್ತರತಾರುಣ್ಯ ಒಂದು ಸ್ಪಷ್ಟರೂಪ ತಾಳಿ ಮುಂದೆ ಸುಮಾರು ಅರವತ್ ವಯಸ್ಸಿನವರೆಗೆ ಮುಂದುವರಿಯುತ್ತವೆ. ಆದರೆ ಈ ಅ ಯಲ್ಲಿಯೇ ವಯಸ್ಸು ಹೆಚ್ಚಿದಂತೆ ವ್ಯಕ್ತಿವ್ಯತ್ಯಾಸ ಕಡಿಮೆಯಾಗುತ್ತಾ ಬರುವುದರ ಜೊತೆಗೆ, ಅಭಿರುಚಿಗಳಲ್ಲಿ ಮಾರ್ಪಾಡುಗಳು ಉಂಟಾಗುತ್ತವೆ ಎಂಬುದೂ ಬೆ ಬಂದಿದೆ. ಸುಮಾರು ೨೦ ರಿಂದ ೩೫ ವರ್ಷ ವಯಸ್ಕರ ರುಚಿಗಳಲ್ಲಿ ಗಣನೀಯ ವ್ಯಕ್ತಿವ್ಯತ್ಯಾಸಗಳು ಕಂಡುಬಂ ೩೫ ರಿಂದ ೫೫ ವರ್ಷ ವಯಸ್ಸಿನವರಲ್ಲಿ ಆ ವ್ಯತ್ಯಾಸ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತವೆ. ಮುಂದೆ ಸುಮಾ ೩೫ ರಿಂದ ೬೫ ವರ್ಷ ವಯಸ್ಸಿನವರಲ್ಲಿ ಅಷ್ಟಾಗಿ ವ್ ವ್ಯತ್ಯಾಸಗಳು ಕಂಡುಬರವು. ವಯಸ್ಸು ಹೆಚ್ಚಿದ ಕೆಲವು ಅಭಿರುಚಿಗಳು ಇಳಿಮುಖವಾದರೆ, ಮತ್ತೆ ಕೆ ಹೆಚ್ಚು ತೀವ್ರತರವಾಗುತ್ತವೆ. ಇಲ್ಲಿ ಬಹು ಮುಖ್ಯ ಗಮನಿಸಬೇಕಾದ ಅಂಶವೆಂದರೆ ಸುಮಾರು ಇಪ್ಪತ್ತ ವರ್ಷ ವಯಸ್ಸಿನಲ್ಲಿ ಹೆಚ್ಚು ಪ್ರಿಯವಾಗಿದ್ದ ಚಟುವಟಿಕೆ ಜೀವಿತದಾದ್ಯಂತ ಒಂದಿಲ್ಲ ಒಂದು ರೀತಿಯಲ್ಲಿ ಪ್ರಿಯ ಗಿಯೇ ಉಳಿಯುತ್ತವೆಂಬುದು. ಈ ನಿಯಮಕ್ಕೆ ಹೊ ದವರೂ ಇಲ್ಲದಿಲ್ಲ.

೩. ಅಭಿರುಚಿಗಳ ವ್ಯವಸ್ಥಿತ ಅಧ್ಯಯನ

ವ್ಯಕ್ತಿಯ ವರ್ತನೆಗಳನ್ನು ಮತ್ತು ಅವುಗಳಿಂದ
ೂರೆಯಬಹುದಾದ ಸಂತೃಪ್ತಿಯನ್ನು ನಿರ್ಧರಿಸುವಲ್ಲಿ ಅಭಿ
ಚಿಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು
ರಿತಮೇಲೆ, ಅವುಗಳ ಸ್ವಭಾವ ಲಕ್ಷಣಗಳ ಬಗ್ಗೆ ಹೆಚ್ಚು
ಚ್ಚು ವ್ಯವಸ್ಥಿತ ಅಧ್ಯಯನಗಳು ನಡೆದವು. ಮೇಲಾಗಿ
ಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನ ಕ್ಷೇತ್ರದಲ್ಲಿ
ಡೆದಿರುವ ಆಂದೋಲನದಿಂದಾಗಿ ಶಿಕ್ಷಣ ತಜ್ಞರ ಮತ್ತು
ನೋವಿಜ್ಞಾನಿಗಳ ಗಮನವು ಅಭಿರುಚಿಗಳ ಅಧ್ಯಯನದತ್ತ
ರಿದದ್ದು ಈ ಕ್ಷೇತ್ರದಲ್ಲಿ ತ್ವರಿತಗತಿಯ ಪ್ರಗತಿಯಾಗಲು
ರಣವಾಯಿತು. ಇದರ ಫಲವಾಗಿ ರೂಪುಗೊಂಡಿರುವ
ನಾರೀತಿಯ ಅಭಿರುಚಿ ಪರೀಕ್ಷೆಗಳು ಶೈಕ್ಷಣಿಕ ಮತ್ತು
ದ್ಯೋಗಿಕ ಮಾರ್ಗದರ್ಶನಗಳಿಗೆ ಮಾತ್ರವಲ್ಲದೆ, ಔದ್ಯೋ
ಕ ಆಯ್ಕೆ ಮತ್ತು ವೃತ್ತಿ ವರ್ಗೀಕರಣಗಳಿಗೂ ಬಹಳ
ನುಕೂಲವಾಗಿವೆ.

ಅಭಿರುಚಿ ಅಧ್ಯಯನಗಳು ಬಹು ಮುಖ್ಯವಾಗಿ
ೀಂದ್ರಿತವಾಗಿರುವ ವಿಭಾಗಗಳೆಂದರೆ, ಅವುಗಳ ಸ್ವಭಾವ
ಕ್ಷಣಗಳು, ಸ್ಥಿರತೆ ಮತ್ತು ಬದಲಾವಣೆ, ಪ್ರಭೇದಗಳು
ುತ್ತು ನಿರ್ಧಾರಕಗಳು ಹಾಗೂ ಮಾಪನ. ಅಭಿರುಚಿಗಳ
ಭಾವ ಲಕ್ಷಣಗಳ ಬಗ್ಗೆ ಈ ಮೊದಲೇ ಸ್ಥೂಲವಾಗಿ ಪ್ರಸ್ತಾ
ಸಲಾಗಿದೆ. ಸಂಶೋಧಕರ ಪ್ರಕಾರ ಅವು ವ್ಯಕ್ತಿತ್ವದಲ್ಲೇ

ಅಂತರ್ಗತವಾಗಿದ್ದು, ವಿವಿಧ ವಸ್ತು, ಚಟುವಟಿಕೆ
ಜನರತ್ತ ವ್ಯಕ್ತಿಯನ್ನು ಆಕರ್ಷಿಸುವ ಅಥವಾ ಅಪಕರ್ಷಿ
ಕಾರಕಗಳು. ಈ ಕಾರಕಗಳು ಸಾಪೇಕ್ಷವಾಗಿ ಚಿರಸ್
ಗಳಾಗಿರುವುದರಿಂದ ಅವುಗಳ ಅಧ್ಯಯನ ಬಹು ಉಪಯ
ವೆಂಬುದು ಹಲವರ ಅಭಿಮತ. ಅವುಗಳ ಸ್ಥಿರತೆ
ಬದಲಾವಣೆಗಳ ಬಗ್ಗೆ ಈ ಹಿಂದೆಯೇ, ವಿವಿಧ ಅಭಿರುಚಿ
ಸಂಬಂಧಿಸಿದಂತೆ ಒಂದು ಸ್ಥೂಲ ವಿಶ್ಲೇಷಣೆಯನ್ನು
ಲಾಗಿದೆ. ಇಲ್ಲಿಯ ವರೆಗೆ ದೊರೆತಿರುವ ತಥ್ಯಾಂಶಗಳ
ರದ ಮೇಲೆ ಹೇಳುವುದಾದರೆ, ವ್ಯಕ್ತಿಯ ಬೆಳವಣಿಗೆ,
ಭವ ಮತ್ತು ಸಾಮಾಜಿಕ, ಆರ್ಥಿಕ ಹಾಗೂ ಔದ್ಯೋಗಿಕ
ವೇಶಗಳಿಗೆ ಅನುಗುಣವಾಗಿ, ಅಭಿರುಚಿಗಳಲ್ಲಿ ಮಾಪ
ಕಂಡುಬಂದರೂ, ತಾರುಣ್ಯದಲ್ಲಿ ನೆಲೆಗೊಂಡ ಅಭಿರು
ಪ್ರೌಢ ವಯಸ್ಸಿನಾದ್ಯಂತ ಬಹುಮಟ್ಟಿಗೆ ಸ್ಥಿರವಾಗಿ
ಯುತ್ತವೆ. ಆದರೆ ಸ್ಥಿರತೆ ಮತ್ತು ಬದಲಾವಣೆಗಳ ವಿ
ದಲ್ಲಿ, ವಿವಿಧ ಅಭಿರುಚಿಗಳಿಗೆ ಅನುಗುಣವಾಗಿ ಕೆಲವು ವ್ಯ
ಗಳು ಆಗುವುದುಂಟು. ಉದಾಹರಣೆಗೆ, ಸಾಮಾಜಿಕ ಶ್ರ
ಸ್ಸಿನ ಬಗ್ಗೆ ಇರುವ ಅಭಿರುಚಿಗಳಲ್ಲಿ ೧೪ ರಿಂದ ೧೮ ವಷ
ವರೆಗೆ ಗಣನೀಯ ಬದಲಾವಣೆ ಕಂಡುಬಂದರೂ, ೧೮
೨೫ ವರ್ಷಗಳ ಅವಧಿಯಲ್ಲಿ ಅವುಗಳಲ್ಲಿ ಆಗುವ ಬದಲ
ಅತ್ಯಲ್ಪ. ಆದರೆ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿ
ಗಳಲ್ಲಿ ಕಿಶೋರಾವಸ್ಥೆಯಿಂದಲೇ ಬದಲಾವಣೆಗಳು ಅ
ವಾಗಿರುತ್ತವೆ.

ಅಭಿರುಚಿಗಳಿಗೂ ಔದ್ಯೋಗಿಕ ಜಯಕ್ಕೂ ನಿಕಟ ಸಂಬಂಧವಿರುವುದನ್ನು ಕಾಣಬಹುದು. ಸೂಪರ್, ಟರ್ಮನ್, ಬಾರ್ನೆಟ್ ಮುಂತಾದ ಸಂಶೋಧಕರು ನಡೆಸಿರುವ ಸಂಶೋಧನೆಗಳಿಂದ ಇದು ಸ್ಪಷ್ಟವಾಗುತ್ತದೆ. ಟರ್ಮನನು ತನ್ನ "ಪ್ರತಿಭಾವಂತ ಮಕ್ಕಳ" ಮೇಲೆ ನಡೆಸಿದ ಸಂಶೋಧನೆಯಲ್ಲಿ, ಔದ್ಯೋಗಿಕ ಜಯವೊಂದಿಗೆ ಅಭಿರುಚಿಗಳಿಗಿರುವ ಸಂಬಂಧವನ್ನು ಹೆಚ್ಚು ಸ್ಪಷ್ಟಪಡಿಸಿದ್ದಾನೆ. ಇದೇ ರೀತಿ ಜಯಶಾಲಿ ಇಂಜನಿಯರುಗಳು, ಮಾರಾಟಗಾರರು ಮತ್ತು ಕಾರಕೂನರು ಆಯಾಯ ಉದ್ಯೋಗದಲ್ಲಿ ಹೆಚ್ಚು ಅಭಿರುಚಿಯುಳ್ಳವರಾಗಿದ್ದರೆಂಬುದು ಬಾರ್ನೆಟನ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಔದ್ಯೋಗಿಕ ಜಯದ ಮೇಲೆ ಪ್ರಭಾವ ಬೀರಬಹುದಾದ, ವಿಶೇಷ ಸಾಮರ್ಥ್ಯ ಮತ್ತು ಅಭಿಪ್ರೇರಣೆಗಳನ್ನು ನಿಯಂತ್ರಿಸಿ, ಸೂಕ್ತ ಒರೆಗಲ್ಲುಗಳಿಂದ ಪರೀಕ್ಷಿಸಿದಾಗ ಅಭಿರುಚಿಗಳು ಔದ್ಯೋಗಿಕ ಜಯದೊಂದಿಗೆ ಸಾಕಷ್ಟು ಸಂಬಂಧ ಹೊಂದಿರುವುದು ತಾನಾಗಿಯೇ ಗೋಚರವಾಗುತ್ತದೆ ಎಂಬುದು ಸೂಪರನ ಅಭಿಮತ.

ಅಭಿರುಚಿ ನಿರ್ಧಾರಕಗಳು : ಅಭಿರುಚಿ ನಿರ್ಧಾರಕಗಳು ಒಂದಲ್ಲ, ಎರಡಲ್ಲ, ಹಲವು. ಅವುಗಳಲ್ಲಿ ಪ್ರಧಾನವಾಗಿ, ಅಭಿಪ್ರೇರಣೆ, ಅವಧಾನ, ಲಿಂಗ, ಬುದ್ಧಿಶಕ್ತಿ ಮತ್ತು ಅಭಿಕ್ಷಮತೆ, ಸಾಮಾಜಿಕ ಪಾತ್ರ ನಿರೀಕ್ಷಣೆ, ವ್ಯಕ್ತಿತ್ವ ಮತ್ತು ಅನುಭವಗಳು ಅಭಿರುಚಿಗಳ ರೂಪಣೆ, ಸ್ಥಿರತೆ ಮತ್ತು ಬದಲಾವಣೆಗಳನ್ನು ನಿರ್ಧರಿಸುತ್ತವೆ. ಈ ನಿರ್ಧಾರಕಗಳು

ಒಂದೊಂದೇ ಪ್ರತ್ಯೇಕವಾಗಿ ಕಾರ್ಯಾಚರಣೆ ಮಾಡದೆ, ಇತರ ನಿರ್ಧಾರಕಗಳೊಂದಿಗೆ ಸೇರಿ ವ್ಯವಹರಿಸುವುದರಿಂದ, ಯಾವ ನಿರ್ಧಾರಕದ ಪಾತ್ರ ಎಷ್ಟು ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟ. ಆದರೆ, ಕೆಲವು ಸಂಶೋಧಕರ ಪ್ರಯತ್ನದಿಂದ ಕೆಲವು ಗಣನೀಯ ಮಾಹಿತಿಗಳು ದೊರೆತಿರುವುದರಿಂದ, ಕೆಲವು ನಿರ್ಧಾರಕಗಳು ಉಳಿದವುಗಳಿಗಿಂತ ಹೆಚ್ಚು ಪ್ರಭಾವಶಾಲಿಗಳೆಂದು ಹೇಳಬಹುದಾಗಿದೆ. ಉದಾಹರಣೆಗೆ, ಅಭಿಪ್ರೇರಣೆ ಮತ್ತು ಅವಧಾನಗಳು ಅಭಿರುಚಿಯ ಮೇಲೆ ನೇರ ಪ್ರಭಾವ ಬೀರಬಲ್ಲವು. ಹಾಗೆಯೇ ಸ್ತ್ರೀ ಪುರುಷರ ಕೆಲವು ಅಭಿರುಚಿಗಳಲ್ಲಿ ಗಣನೀಯ ವ್ಯತ್ಯಾಸ ಕಂಡುಬರುತ್ತವೆ. ಸಾಮಾಜಿಕ-ಆರ್ಥಿಕ ಅಂತಸ್ತು, ಪಠ್ಯವಿಷಯ, ಕಸಬು ಮತ್ತು ಹವ್ಯಾಸಗಳ ಮೇಲಿನ ಇಷ್ಟಾನಿಷ್ಟಗಳನ್ನು ಬಹುಮಟ್ಟಿಗೆ ನಿರ್ಧರಿಸಬಲ್ಲದು. ಉದಾಹರಣೆಗೆ, ವಿವಿಧ ಆರ್ಥಿಕ ಸಾಮಾಜಿಕ ವರ್ಗದ ಜನರ ಉದ್ಯೋಗಾಭಿರುಚಿಗಳಲ್ಲಿ ಗಣನೀಯ ವ್ಯತ್ಯಾಸಗಳಿರುವುದನ್ನು ಕಾಣಬಹುದು. ಇದರಂತೆಯೇ ಅಭಿರುಚಿಗಳ ಬೆಳವಣಿಗೆಯಲ್ಲಿ ಅಭಿಕ್ಷಮತೆಗಳು ಗಣನೀಯ ಪ್ರಭಾವ ಬೀರುತ್ತವೆಂಬುದು ಸಂಶೋಧನೆಗಳಿಂದ ಹೊರಬಿದ್ದಿರುವ ತಥ್ಯಾಂಶ. ಪರಹಿತಭಾವದಂತಹ ಕೆಲವು ವ್ಯಕ್ತಿತ್ವಕಾರಕಗಳೂ ಅಭಿರುಚಿಗಳ ಬೆಳವಣಿಗೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತವೆ ಎಂಬುದು ಕೆಲವು ಪರಿಣತರ ಅಭಿಮತ. ಆದರೆ ಅಭಿರುಚಿಗಳ ನಿರ್ಧಾರಕಗಳನ್ನು ವಿಶ್ಲೇಷಿಸುವಾಗ ಯಾವುದಾದರೊಂದು ಕಾರಕವನ್ನೇ ಪ್ರಧಾನವಾಗಿ ಪರಿಗಣಿಸುವುದರಿಂದ ಸಮಸ್ಯೆಯನ್ನು ಹೆಚ್ಚು ಸರಳೀಕರಿಸಿದ ದೋಷ ತಟ್ಟುತ್ತದೆ ಎಂಬ ಸೂಪರನ ಎಚ್ಚರಿಕೆಯ ಮಾತು

ವಿಚಾರಾರ್ಹ. ಮೊದಲೇ ಹೇಳಿದಂತೆ, ವಾಸ್ತವವಾಗಿ ಅಭಿರುಚಿಗಳ ರೂಪಣೆ, ಸ್ಥಿರತೆ ಮತ್ತು ಬದಲಾವಣೆಗಳ ಮೇಲೆ, ಹಲವು ಕಾರಕಗಳು ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವ ಬೀರುತ್ತವೆಂಬುದನ್ನು ಅಲ್ಲಗಳೆಯುವಂತಿಲ್ಲ.

ಅಭಿರುಚಿಗಳ ಅಳತೆ : ಅಭಿರುಚಿಗಳನ್ನು ವೈಜ್ಞಾನಿಕ ವಿಧಾನಗಳಿಂದ ಅಳೆದಾಗ ಅವುಗಳ ಬಗ್ಗೆ ನಮಗೆ ಹೆಚ್ಚು ವಸ್ತುನಿಷ್ಠ ಜ್ಞಾನ ದೊರೆಯಬಲ್ಲದು. ಈ ದಿಸೆಯಲ್ಲಿ ಮನೋವಿಜ್ಞಾನಿಗಳೂ ಶಿಕ್ಷಣ ತಜ್ಞರೂ ನಡೆಸಿರುವ ಪ್ರಯತ್ನ ಮತ್ತು ಮಾಡಿರುವ ಸಾಧನೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತವೆ. ಈ ಕ್ಷೇತ್ರದಲ್ಲಿ ಮೂಲ ಕೃಷಿಕರೆಂದರೆ ಸ್ಟ್ರಾಂಗ್, ಕ್ಯೂಡರ್, ಡಾರ್ಲೆ ಮತ್ತು ಹೆಗಿನ್ಹಾ, ಸೂಪರ್ ಮುಂತಾದವರು. ಅಭಿರುಚಿಗಳ ಅಳತೆಗಾಗಿ ಇವರುಗಳು ಮಾಡಿರುವ ಚಿಂತನೆ, ಕೃಷಿ ಮತ್ತು ಸಾಧನೆಗಳನ್ನು ಯಾರೂ ಮರೆಯುವಂತಿಲ್ಲ.

ಅಭಿರುಚಿಗಳ ವ್ಯವಸ್ಥಿತ ಅಳತೆಯ ಇತಿಹಾಸ ಬಹಳ ಇತ್ತೀಚಿನದಾದರೂ, ಅಳತೆಯ ಪ್ರಯತ್ನಕ್ಕೆ ಬಹಳ ಪ್ರಾಚೀನ ಹಿನ್ನೆಲೆಯಿರುವಂತಿದೆ. ವ್ಯಕ್ತಿಯೊಬ್ಬನ ಅಭಿರುಚಿಗಳನ್ನು ಗುರುತಿಸುವ ಕೆಲವು ಆಕಸ್ಮಿಕ ವಿಧಾನಗಳು ಬಹು ಹಿಂದಿನ ಕಾಲದಿಂದಲೂ ಪ್ರಚಲಿತವಾಗಿವೆ ಎಂಬುದು ನಿರ್ವಿವಾದ ಸಂಗತಿ. ಅಂತಹ ವಿಧಾನಗಳಲ್ಲಿ ಒಂದು 'ಸನ್ನಿವೇಶ ಪರೀಕ್ಷೆ'. ಒಂದು ಗೊತ್ತಾದ ಸನ್ನಿವೇಶದಲ್ಲಿ ವ್ಯಕ್ತಿಯು ತನ್ನ ಇಷ್ಟಾನಿಷ್ಟಗಳನ್ನು ಹೇಗೆ ಕಾರ್ಯರೂಪಕ್ಕೆ ತರುತ್ತಾನೆ ಎಂಬುದನ್ನು ಅವಲೋಕಿಸುವುದೇ ಸನ್ನಿವೇಶ ಪರೀಕ್ಷೆಯ ಪ್ರಧಾನ

ಕ್ರಿಯೆ. ಚಾಮರಾಜ ಒಡೆಯರವರನ್ನು ಮೈಸೂರು ಸಿಂಹಾಸನದ ಒಡೆತನಕ್ಕೆ ಆರಿಸುವ ಸಂದರ್ಭದಲ್ಲಿ ಇಂತಹ ಒಂದು ಪರೀಕ್ಷೆಯನ್ನು ನಡೆಸಲಾಯಿತು ಎಂಬುದರ ಬಗ್ಗೆ ದಂತಕಥೆಯೊಂದು ಪ್ರಚಲಿತವಾಗಿದೆ. ಖಾಲಿಯಾದ ಸಿಂಹಾಸನಕ್ಕೆ ವಾರಸುದಾರರನ್ನು ಆರಿಸುವ ಸಲುವಾಗಿ, ಅರಸುಮನೆತನಗಳ ಬಾಲಕರನ್ನೆಲ್ಲಾ ಕರೆಸಿ ಅವರ ಮುಂದೆ ನಾನಾ ವಿಧವಾದ ಆಟದ ಸಾಮಾನುಗಳನ್ನು ಹರಡಿ, ಅವರವರಿಗೆ ಬೇಕಾದ್ದನ್ನು ಆರಿಸಿಕೊಳ್ಳಬಹುದೆಂದು ಹೇಳಲಾಯಿತು. ಇತರ ಬಾಲಕರು ತಮಗೆ ಮೋಹಕವಾಗಿ ಕಂಡ ಆಟಿಕೆಗಳನ್ನು ಆರಿಸಿಕೊಂಡರೆ, ಬಾಲಕ ಚಾಮರಾಜ ಒಡೆಯರು ಅಲ್ಲಿಟ್ಟಿದ್ದ ಆಟದ ಕತ್ತಿಯೊಂದನ್ನು ಆರಿಸಿಕೊಂಡರು. ಅವರ ಅಭಿರುಚಿ ಮತ್ತು ಪ್ರತಿಭೆಗಳನ್ನು ಗುರುತಿಸಿದ ಹಿರಿಯರು ಅವರಿಗೆ ಮೈಸೂರು ರಾಜ್ಯದ ಪಟ್ಟಕಟ್ಟಿದರು. ಈ ದಂತಕಥೆಯ ಸತ್ಯಾಸತ್ಯತೆ ಏನೇ ಇರಲಿ, ಸೂಕ್ತ ಸನ್ನಿವೇಶ ದೊರೆತಾಗ ಅಭಿರುಚಿಗಳು ಅಭಿವ್ಯಕ್ತವಾಗುತ್ತವೆ ಎಂಬ ಅಂಶವನ್ನು ಇದು ಸೂಚಿಸುತ್ತದೆಯಲ್ಲದೆ, 'ಸನ್ನಿವೇಶ ಪರೀಕ್ಷೆ' ಇಂದು ಸೇನಾಧಿಕಾರಿಗಳ ಆಯ್ಕೆಯಲ್ಲಿ ಬಳಕೆಯಲ್ಲಿರುವ ಪ್ರಮುಖ ವಿಧಾನಗಳಲ್ಲೊಂದಾಗಿದೆ.

ಮೇಲ್ಕಂಡಂತಹ ವಿಧಾನಗಳು, ಇಂದು ಸಂಸ್ಕರಿಸಲ್ಪಟ್ಟು ಉತ್ತಮ ವಿಧಾನಗಳೆನಿಸಿದ್ದರೂ, ಹಿಂದೆ, ವಿವಿಧ ಸಂಸ್ಕೃತಿಗಳ ಜನಜೀವನದಲ್ಲಿ ಅವು ಬಳಕೆಯಲ್ಲಿದ್ದಾಗ, ಆಕಸ್ಮಿಕವೆನಿಸಿ, ಅನೇಕ ವೇಳೆ ವ್ಯಕ್ತಿನಿಷ್ಠ ಅಳತೆಗೋಲುಗಳಿಂದ ಪ್ರಭಾವಿತವಾಗಿರುತ್ತಿದ್ದವು. ಈ ದೋಷ ನಿವಾರಣೆಗಾಗಿ,

ರ್ಗ೩೦ ರಿಂದ ಈಚೆಗೆ ಹೆಚ್ಚು ವಸ್ತುನಿಷ್ಠವೂ, ವ್ಯವಸ್ಥಿತವೂ ಆದ ವಿಧಾನಗಳನ್ನು ರೂಪಿಸುವ ಪ್ರಯತ್ನಗಳು ನಡೆದ ಫಲವಾಗಿ ಇಂದು ಅನೇಕ ಪ್ರಮಾಣಿತ ಅಳತೆಗೋಲುಗಳು ನಮಗೆ ದೊರೆತಿವೆ. ಈ ದೃಷ್ಟಿಯಿಂದ ನೋಡಿದಾಗ ಅಭಿರುಚಿಗಳ ಅಳತೆಯ ಇತಿಹಾಸ ಬಹಳ ಸಂಕ್ಷಿಪ್ತವಾದುದು.

ಅಭಿರುಚಿಗಳನ್ನು ವ್ಯವಸ್ಥಿತವಾಗಿ ಅಳಿತೆ ಮಾಡಲು ಪ್ರಯತ್ನಿಸುವುದಕ್ಕೆ ಪ್ರೇರಕ ಕಲ್ಪನೆ, "ಒಂದೇತರದ ಪುಕ್ಕವುಳ್ಳ ಹಕ್ಕಿಗಳು ಜೊತೆಗೂಡುತ್ತವೆ" ಎಂಬ ನಾಣ್ಣುಡಿಯಲ್ಲಿ ಅಡಕವಾಗಿದೆ. ಇದನ್ನು ಮೊಟ್ಟಮೊದಲಿಗೆ ಸ್ಪಷ್ಟವಾಗಿ ಗುರುತಿಸಿದ ಕೀರ್ತಿ ಎಡ್ವರ್ಡ್ ಸ್ಟ್ರಾಂಗನಿಗೆ ಸೇರಬೇಕು. ಅಭಿರುಚಿಗಳ ಅಳತೆಗೆ ಸೂಕ್ತ ವೈಜ್ಞಾನಿಕ ನಂಬಿಕೆಯನ್ನು ನೀಡಿದವನೇ ಈತ. ಆ ನಂಬಿಕೆ :

ಯಾವುದಾದರೂ ಒಂದು ಉದ್ಯೋಗದಲ್ಲಿದ್ದು, ಅದರಿಂದ ಸಾಕಷ್ಟು ಸಂತೃಪ್ತಿ ಪಡೆದಿರುವಂತಹ ವ್ಯಕ್ತಿಗಳನ್ನು, ಅವರ ಅಭಿರುಚಿ ವಿನ್ಯಾಸಕ್ಕೆ ಸಂಬಂಧಿಸಿದಂತೆ, ಇತರ ಉದ್ಯೋಗಗಳಲ್ಲಿ ಸಾಕಷ್ಟು ಸಂತೃಪ್ತಿ ಪಡೆದವರಿಂದ ವಿಭಿನ್ನರೆಂದು ಪರಿಗಣಿಸಬಹುದು.

ಮೇಲ್ಕಂಡ ವೈಜ್ಞಾನಿಕ ನಂಬಿಕೆಯಿಂದ ಅಂದು ಸ್ಟ್ರಾಂಗನು ಆರಂಭಿಸಿದ ಅಭಿರುಚಿ ಮಾಪನ ಕಾರ್ಯ ಇಂದು ವ್ಯಾಪಕವಾಗಿ ಬೆಳೆದು, ಅನೇಕ ಅಳತೆಗೋಲುಗಳನ್ನು ನಮಗೆ ಒದಗಿಸುವುದರ ಜೊತೆಗೆ, ಅಭಿರುಚಿಗಳ ಆಂತರ್ಯವನ್ನು ಅರಿಯಲು ಬೇಕಾದ ಕೆಲವು ಒಳನೋಟಗಳನ್ನೂ ಕೊಟ್ಟಿದೆ.

ಇಂದು ಅಭಿರುಚಿಗಳನ್ನು ಅಳೆಯುವ ಕಾಯ
ಪ್ರಮುಖವಾಗಿ ನಾಲ್ಕು ರೀತಿಯಲ್ಲಿ ನಡೆದಿದೆ. ಈ ರಿ
ಗಳನ್ನು ಆಧರಿಸಿ ಅಭಿರುಚಿಗಳನ್ನು 'ಅಭಿವ್ಯಕ್ತ', 'ಪ್ರ
ಶಿತ', 'ಪರೀಕ್ಷಿತ' ಮತ್ತು 'ಅಂಶಮಾಲಾ' ಅಭಿರುಚಿಗಳೆಂ
ವಿಂಗಡಿಸಲಾಗಿದೆ. ವ್ಯಕ್ತಿಯೊಬ್ಬನು ಕೆಲವು ವಸ್
ವಿಷಯ ಅಥವಾ ಚಟುವಟಿಕೆಗಳ ವಿಷಯವಾಗಿ ಮಾತಿ
ಮೂಲಕ ತನ್ನ ಇಷ್ಟಾನಿಷ್ಟಗಳನ್ನು ವ್ಯಕ್ತಮಾಡಿದಾ
ಅಂತಹ ಇಷ್ಟಾನಿಷ್ಟಗಳು ಅಭಿವ್ಯಕ್ತ ಅಭಿರುಚಿಗಳೆನಿಸುತ್ತ
ಅದಕ್ಕೆ ಬದಲಾಗಿ, ಕಾರ್ಯತಃ ಕೆಲವು ವಸ್ತು ವಿಷಯಗಳ
ಒಲವು ತೋರಿಸಿದಾಗ ಆ ಒಲವುಗಳನ್ನು ಪ್ರಕಾಶಿತ ಅಭಿರು
ಗಳೆಂದು ಕರೆಯಲಾಗುತ್ತದೆ. ಇನ್ನು ವ್ಯಕ್ತಿಯ ಅವಧಾನ
ಸ್ಮೃತಿ, ಶಬ್ದಸಂಪತ್ತು ಮೊದಲಾದವುಗಳನ್ನು ಪ್ರಮಾಣಿ
ಪರೀಕ್ಷೆಗಳ ಆಧಾರದಿಂದ ಅಳೆದಾಗ ದೊರೆಯುವ ತಥ್ಯಾಂ
ಗಳು ಪರೀಕ್ಷಿತ ಅಭಿರುಚಿಗಳನ್ನು ಸೂಚಿಸುತ್ತವೆ. ಕೊನೆಯ
ದಾಗಿ, ಪ್ರಮಾಣಿತ ಅಂಶಮಾಲೆಗಳ ಬಳಕೆಯಿಂದ ಕಂಡ
ಹಿಡಿದ ಅಭಿರುಚಿಗಳು ಅಂಶಮಾಲಾ ಅಭಿರುಚಿಗಳೆನಿಸುತ್ತವ

ಅಳತೆಗೋಲುಗಳ ರೂಪಣೆ: ಅಭಿರುಚಿಗಳನ
ನಾವು ಯಾವುದೇ ರೀತಿಯಲ್ಲಿ ಅಳೆಯಬೇಕಾದರೂ ವಿಶ್ವಾ
ನೀಯ ಮತ್ತು ಸಪ್ರಮಾಣಿತ ಅಳತೆಗೋಲುಗಳು ಅತ
ವಶ್ಯಕ. ಅಂತಹ ಅಳತೆಗೋಲುಗಳು ಅಭಿರುಚಿ ಪರೀ
ಗಳಾಗಿರಬಹುದು ಅಥವಾ ಅಂಶಮಾಲೆಗಳಾಗಿರಬಹುದು
ಅವುಗಳ ರಚನೆ ಮತ್ತು ಪ್ರಮಾಣೀಕರಣ ಪ್ರಕ್ರಿಯೆಯ
ಸಾಪೇಕ್ಷವಾಗಿ ದೀರ್ಘವಾದುದು. ಈ ಪ್ರಕ್ರಿಯೆಯು ಪ್ರ

ಹಂತದಲ್ಲಿಯೂ ನಿರ್ಮಾಪಕನು ಸಾಕಷ್ಟು ಎಚ್ಚರ ವಹಿಸಬೇಕಾಗುತ್ತದೆ. ಪ್ರಾರಂಭದಲ್ಲಿ, ನಾವು ಅಳೆಯಲಿರುವ ಅಭಿರುಚಿ ಅಥವಾ ಅಭಿರುಚಿಗಳ ವಿವರಾತ್ಮಕ ವ್ಯಾಖ್ಯೆ ಕೊಡಬೇಕಾಗುತ್ತದೆ. ಉದಾಹರಣೆಗೆ "ಸಾಮಾಜಿಕ ಅಭಿರುಚಿ" ಎಂದಾಗ ಅದು ಹೇಗೆ ವ್ಯಕ್ತಿಯ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದೆ, ಅದರಲ್ಲಿ ಪ್ರಧಾನವಾಗಿ ಅಡಕವಾಗಿರುವ ಕಾರ್ಯಾಚರಣೆಗಳಾವುವು ಮತ್ತು ಅದು 'ಔದ್ಯೋಗಿಕ' ಮುಂತಾದ ಇತರ ಅಭಿರುಚಿಗಳಿಂದು ಹೇಗೆ ಭಿನ್ನವಾಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. "ಸಾಮಾಜಿಕ ಅಭಿರುಚಿ" ಎಂಬುದು ಕೇವಲ ಒಂದೇ ವರ್ತನೆಗೆ ಅನ್ವಯಿಸದೆ, ಅದು ಒಂದು ವಿನ್ಯಾಸವಾಗಿರುತ್ತದೆ ಎಂಬ ಅಂಶವನ್ನು ಮರೆಯಬಾರದು.

ಸಂಪನ್ಮೂಲಗಳು ಮತ್ತು ಪರೀಕ್ಷಾಂಶ ರೂಪಣೆ : ನಾವು ಅಳತೆ ಮಾಡಲಿರುವ ಅಭಿರುಚಿ ಅಥವಾ ಅಭಿರುಚಿಗಳ ಒಂದು ಸ್ಥೂಲ ಕಲ್ಪನೆಯನ್ನು ಪಡೆದ ಮೇಲೆ, ಅವುಗಳ ಪ್ರತ್ಯೇಕ ಕ್ರಿಯೆಗಳನ್ನು ಪ್ರತಿನಿಧಿಸುವಂತಹ ಪರೀಕ್ಷಾಂಶಗಳನ್ನು ರೂಪಿಸಬೇಕಾಗುತ್ತದೆ. ಇದಕ್ಕೆ ಬೇಕಾದ ಸಂಪನ್ಮೂಲಗಳು ಅಭಿರುಚಿ ಮಾಪನ ಸಾಹಿತ್ಯದ ಅಧ್ಯಯನದಿಂದಲೂ, ಅಭಿರುಚಿ ಪ್ರಧಾನ ವರ್ತನೆಯ ಅವಲೋಕನದಿಂದಲೂ ಹಾಗೂ ಪರಿಣತರೊಂದಿಗೆ ಚರ್ಚಿಸುವುದರಿಂದಲೂ ನಮಗೆ ದೊರೆಯುತ್ತವೆ.

ನಮಗೆ ದೊರೆತ ಸಂಪನ್ಮೂಲಗಳಲ್ಲಿ, ಪ್ರಾತಿನಿ
ಮಾಹಿತಿಗಳನ್ನು ಆರಿಸಿಕೊಂಡು ಅವುಗಳನ್ನು ಪ್ರಶ್ನೆ ಅಥ
ಹೇಳಿಕೆಗಳ ರೂಪದಲ್ಲಿ ಬರೆಯಬೇಕು. ಇದು ಬಹು ಶ್ರ
ಸಾಧ್ಯ ಮತ್ತು ಸ್ವಲ್ಪ ಸಮಯದವರೆಗೆ ಅವ್ಯಾಹತವ
ಸಾಗಬೇಕಾದ ಕಾರ್ಯ. ಪರೀಕ್ಷಾಂಶ ರಚಿಸುವಲ್ಲಿ ಅ
ರೂಪ ಮತ್ತು ಅರ್ಥಗಳಿಗೆ ಆದ್ಯಗಮನ ಕೊಡಬೇಕಾ
ತ್ತದೆ. ಪ್ರತಿಯೊಂದು ಪರೀಕ್ಷಾಂಶವೂ ಗೊತ್ತಾದ ಅಭಿರುಚಿ
ಒಂದಲ್ಲ ಒಂದು ಕ್ರಿಯೆಯನ್ನು ವಿವರಿಸುವಂತಿರಬೇಕ
ಭಾಷೆಯು ಸರಳವಾಗಿರಬೇಕು ಹಾಗೂ ದ್ವಂದ್ವಾರ್ಥರ
ವಾಗಿರಬೇಕು.

ಹೀಗೆ ರಚಿಸಿದ ಪರೀಕ್ಷಾಂಶಗಳನ್ನು ಎಡಬಿಡದೆ ಕೆಲ
ಸಲ ಕೆಲವು ಸಂಸ್ಕಾರಗಳಿಗೆ ಒಳಪಡಿಸಬೇಕಾಗುತ್ತ
ಅಂತಹ ಸಂಸ್ಕಾರಗಳಲ್ಲಿ ಪ್ರಧಾನವಾದವು ಪರೀಕ್ಷಾ
ವಿಮರ್ಶೆ, ವಿಶ್ಲೇಷಣೆ ಮತ್ತು ಆಯ್ಕೆ ಹಾಗೂ ಪರೀಕ್ಷೆ
ವಿಶ್ವಾಸನೀಯತೆ ಮತ್ತು ಸಿಂಧುತ್ವಗಳನ್ನು ನಿರ್ಧರಿಸುವುದ
ಕೊನೆಯಲ್ಲಿ, ಹೋಲಿಸಲು ಬೇಕಾಗುವ ಪ್ರಮಾಣಕಗಳನ
ರೂಪಿಸುವುದು. ಇವುಗಳಲ್ಲಿ ಒಂದೊಂದೂ ಮಹತ್ವಪೂ
ವಾದ ಪ್ರಕ್ರಿಯೆ. ಒಂದೊಂದೂ ಉತ್ತಮ ತಾಂತ್ರಿ
ಯನ್ನು ಆಧರಿಸಿರುವುದರಿಂದ, ಈ ಕಿರುಹೊತ್ತಿಗೆಯ
ಹೆಚ್ಚು ವಿವರಗಳನ್ನು ಕೊಡುವ ಅಗತ್ಯವಿಲ್ಲ ಎಂದು ಭಾವಿ
ತ್ತೇನೆ. ಒಟ್ಟಿನಲ್ಲಿ, ಎಷ್ಟು ನಿಖರವಾದ ಅಳತೆಗೋಲುಗಳನ
ನಾವು ರೂಪಿಸಬಲ್ಲೆವೋ, ಅಷ್ಟು ನಿಖರವಾಗಿ ನಾವು ಅಭಿರು
ಗಳನ್ನು ಅಳೆಯಬಲ್ಲೆವು ಎಂಬುದನ್ನು ಯಾರೂ ಮರೆ
ಲಾಗದು.

೪. ಅಭಿರುಚಿ ಅಂಶಮಾಲೆಗಳು

ಅಭಿರುಚಿ ಮಾಪನದಲ್ಲಿ ಹೆಚ್ಚು ಪ್ರಚಲಿತವಿರುವ ಸಾಧನೆಗಳೆಂದರೆ ಅಭಿರುಚಿ ಅಂಶಮಾಲೆಗಳು. ಇದಕ್ಕೆ ಕಾರಣ ಅವುಗಳ ವಸ್ತುನಿಷ್ಠತೆ. ಯಾವುದೇ ಅಭಿರುಚಿ ಅಂಶಮಾಲೆಯಲ್ಲಿ ವ್ಯಕ್ತಿಯ ಜೀವನ ಸನ್ನಿವೇಶಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರತಿನಿಧಿಸುವ ಅನೇಕ ಪರೀಕ್ಷಾಂಶಗಳಿರುತ್ತವೆ. ಅವುಗಳಲ್ಲಿ ಒಂದೊಂದಕ್ಕೂ ಪರೀಕ್ಷಾರ್ಥಿಯು ತನ್ನ ಅನುಕ್ರಿಯೆಯನ್ನು ತೋರಿಸಬೇಕಾಗುತ್ತದೆ. ಹೀಗೆ ಪಡೆದ ಅನುಕ್ರಿಯೆಗಳ ಪಾರಿಮಾಣಿಕ ವಿಶ್ಲೇಷಣೆಯು, ಜೀವನದ ವಿವಿಧ ರಂಗಗಳಲ್ಲಿ ಆ ವ್ಯಕ್ತಿಗೆ ಇರಬಹುದಾದ ಅಭಿರುಚಿಯನ್ನು ಸೂಚಿಸುವ, ಪ್ರಾಪ್ತಾಂಕಗಳನ್ನು ಒದಗಿಸುತ್ತದೆ. ಅಂತಹ ಪ್ರಾಪ್ತಾಂಕಗಳನ್ನು ಒಂದು ಪಾರ್ಶ್ವರೇಷೆಯಿಂದ ಪ್ರತಿನಿಧಿಸಲು ಸಾಧ್ಯವಾಗುತ್ತದೆ. ಪಾರ್ಶ್ವರೇಷೆಯು ವ್ಯಕ್ತಿಯ ಅಭಿರುಚಿ ವಿನ್ಯಾಸವನ್ನು ತೋರಿಸುತ್ತದೆ.

೧೯೧೯-೨೦ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ನಡೆದ ವಿಚಾರಗೋಷ್ಠಿಯು ಅಭಿರುಚಿ ಅಂಶಮಾಲೆಗಳ ರಚನೆಗೆ ಮೂಲವಾಯಿತು. ಅಂಶಮಾಲೆಗಳ ರಚನೆಯಲ್ಲಿ ಪ್ರಮುಖವಾಗಿ ಪರೀಕ್ಷಾಂಶಗಳ ಪ್ರಾತಿನಿಧಿಕ ಸಾಮರ್ಥ್ಯ ಮತ್ತು ಅಂಕನಕುಂಜಿಗಳ ರೂಪಣ ಸಾಧ್ಯತೆ, ಈ ಎರಡಂಶಗಳಿಗೆ ಪ್ರಾಮುಖ್ಯತೆ ಕೊಡಲಾಯಿತು. ಮೊದಲನೆಯ ಅಂಶದ ಪ್ರಕಾರ, ಪರೀಕ್ಷಾರ್ಥಿಯ ವಿವಿಧ ರಂಗಗಳ ಚಟುವಟಿಕೆಗಳನ್ನು ಪ್ರತಿನಿಧಿಸುವ ಸಾಮರ್ಥ್ಯ ಪರೀಕ್ಷಾಂಶಗಳಿಗೆ

ಇರಬೇಕಾಗುತ್ತದೆ. ಎರಡನೆಯ ಅಂಶದ ಪ್ರಕಾರ ಪರೀ
ರ್ಥಿಯ ಅನುಕ್ರಿಯೆಗಳನ್ನು ಅರ್ಥಪೂರ್ಣವಾಗಿ ವಿವರಿಸ
ಅನುಕೂಲವಾಗುವಂತೆ ಆನುಭವಿಕ ಅಂಕನಕುಂಜಿಗಳನ
ನಿರ್ಮಿಸುವ ಸಾಧ್ಯತೆ ಇರಬೇಕಾಗುತ್ತದೆ. ಒಂದು ವೃ
ಯಲ್ಲಿರುವ ಜನರ ಅಭಿರುಚಿಗಳಲ್ಲಿ ಸ್ಪಷ್ಟ ಸಾಮ್ಯವೂ ಮತ
ಇತರ ವೃತ್ತಿಗಳಲ್ಲಿರುವವರ ಅಭಿರುಚಿಗಳಿಗಿಂತ ವಿಭಿ
ತೆಯೂ ಇದ್ದಾಗ ಮಾತ್ರ ಅಂಕನಕುಂಜಿಗಳನ್ನು ರೂಪಿಸಲ
ಸಾಧ್ಯವಾಗುತ್ತದೆ. ಅಲ್ಲದೆ, ವಿವಿಧ ವೃತ್ತಿಗಳಲ್ಲಿರುವವ
ಅಭಿರುಚಿಗಳಲ್ಲಿ ಕಂಡುಬರುವ ವ್ಯತ್ಯಾಸವು ಕೇವಲ ವೃತ
ಚಟುವಟಿಕೆಗಳಿಗೆ ಸೀಮಿತವಾಗಿರದೆ, ಅವರ ಹವ್ಯಾಸಗಳ
ಸಾಮಾಜಿಕ ಸಾಹಚರ್ಯಗಳು ಮುಂತಾದ ವರ್ತನೆಗಳಿಗ
ಸಂಬಂಧಿಸಿರಬೇಕು.

ಕೆಲವು ಅಭಿರುಚಿ ಅಂಶಮಾಲೆಗಳು : ಶೈಕ್ಷಣಿ
ಮತ್ತು ವೃತ್ತಿಮಾರ್ಗದರ್ಶನ ಕ್ಷೇತ್ರಗಳಲ್ಲಿ ಬಳಸಲಾಗು
ರುವ ಹಲವು ಅಂಶಮಾಲೆಗಳಿವೆ. ಅವೆಲ್ಲಾ ಹೆಚ್ಚು ಕಡಿ
ಮೇಲ್ಕಂಡ ರಚನಾ ನಿಯಮಗಳ ಆಧಾರದ ಮೇಲೆ ರೂಪಿ
ವಾದವುಗಳೇ. ಉದ್ದೇಶಿತ ಅಭಿರುಚಿಗಳು, ಪರೀಕ್ಷಾಂಶಗ
ಪ್ರರೂಪ ಉತ್ತರ ಕುಂಜಿಗಳ ರೂಪಣೆ ಮುಂತಾದವುಗಳಿ
ಸಂಬಂಧಿಸಿದಂತೆ, ಈ ಅಂಶಮಾಲೆಗಳಲ್ಲಿ ವ್ಯಾಪಕ ವ್ಯತ್ಯಾಸಗ
ರುವುದನ್ನು ಕಾಣಬಹುದು. ಹಲವು, ಭಾಷಾತ್ಮಕ ಪರೀಕ್ಷಾಂ
ಗಳನ್ನು ಹೊಂದಿದ್ದರೆ, ಕೆಲವು ಅಭಾಷಾತ್ಮಕ ಪರೀಕ್ಷಾಂ
ಗಳನ್ನು ಹೊಂದಿರುವುದೂ ಉಂಟು. ಉದಾಹರಣೆಗೆ, ಭಾರ

ದಲ್ಲೇ, ರೂಪಗೊಂಡಿರುವ ಚಿತ್ರಾತ್ಮಕ ಅಭಿರುಚಿ ಪರೀಕ್ಷೆಯನ್ನು ಇಲ್ಲಿ ಪ್ರಸ್ತಾಪಿಸಬಹುದು.

ನಮಗೆ ಇಂದು ದೊರೆಯುವ ಉತ್ತಮ ಅಭಿರುಚಿ ಅಂಶಮಾಲೆಗಳಲ್ಲಿ, ಪ್ರಧಾನವಾದವುಗಳೆಂದರೆ, ಸ್ಟ್ರಾಂಗನ ವೃತ್ತಿಯಭಿರುಚಿ ಸೂಚಿ(Strong's Vocational Interest Blank), ಕ್ಯೂಡರನ ಆಯ್ಕಾಬಂಧ (Kuder's Preference Record), ಕ್ಲೀಟನನ ಅಭಿರುಚಿ ಅಂಶಮಾಲೆ, ಮಿನೆಸೋಟಾ ವೃತ್ತಿಯಭಿರುಚಿ ಅಂಶಮಾಲೆ ಮತ್ತು ಎನ್.ಸಿ.ಇ.ಆರ್.ಟಿ. ಅಭಿರುಚಿ ಅಂಶಮಾಲೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಈ ಅಂಶಮಾಲೆಗಳಲ್ಲಿ ಪ್ರತಿಯೊಂದೂ, ಉದ್ದೇಶ, ರಚನಾವಿಧಾನ, ಪರೀಕ್ಷಾಂಶಗಳ ವೈವಿಧ್ಯಪೂರ್ಣತೆ ಮುಂತಾದ ಕಾರಣಗಳಿಂದ ವೈಶಿಷ್ಟ್ಯಪೂರ್ಣವಾಗಿದೆ.

ಸ್ಟ್ರಾಂಗನ ವೃತ್ತಿಯಭಿರುಚಿ ಸೂಚಿ ; ವೃತ್ತಿಯಭಿರುಚಿಗಳನ್ನು ಅಳತೆಮಾಡುವ ಕಾರ್ಯದಲ್ಲಿ ಎಡ್ವರ್ಡ್ ಸ್ಟ್ರಾಂಗ(ಜ್ಯೂ)ನು ಆಚಾರ್ಯಸ್ಥಾನದಲ್ಲಿದ್ದಾನೆ ಎಂದರೆ ಬಹುಶಃ ತಪ್ಪಾಗದು. ಶಕ್ತಿಸಾಮರ್ಥ್ಯಗಳ ಅಳತೆಯಲ್ಲಿ ಆಲ್‌ಫ್ರೆಡ್ ಬೀನೆಯ ಹೆಸರು ಅದ್ವಿತೀಯವಾಗಿರುವಂತೆಯೇ, ಈ ಕ್ಷೇತ್ರದಲ್ಲಿ ಸ್ಟ್ರಾಂಗನ ಹೆಸರು ಅದ್ವಿತೀಯ. ಅಭಿರುಚಿಗಳ ಅಳತೆ ಮಾಡಲು ಬೇಕಾದ ಆಧಾರ ಕಲ್ಪನೆಗಳನ್ನು ಒದಗಿಸಿದ ಈ ಮೇಧಾವಿ ತನ್ನ ಸ್ವಂತ ಚಿಂತನೆ ಮತ್ತು ಪರಿಶ್ರಮಗಳಿಂದ ಒಂದು ಅಂಶಮಾಲೆಯನ್ನೇ ರೂಪಿಸಿದ. ಈ ಅಂಶಮಾಲೆಯು ಇಂದೂ ಕೂಡ ಅಭಿರುಚಿಗಳ

ಅಳತೆಯ ಕ್ಷೇತ್ರದಲ್ಲಿ ಒಂದು ಅನುಪಮ ಅಳತೆಗೋಲಾ
ಉಳಿದಿದೆ. ಇದು ತಾನೇ ವೃತ್ತಿಯಾಯ್ಕೆ ಮತ್ತು ವೃ
ಮಾರ್ಗದರ್ಶನಗಳಿಗೆ ಬಹು ಉಪಯುಕ್ತ ಸಾಧನವಾಗುವುದ
ಜೊತೆಗೆ, ಹಲವು ಸಾಧನಗಳ ಉತ್ಪತ್ತಿಗೆ ಪ್ರೇರಕಶಕ್ತಿಯ
ಆಗಿ ಉಳಿದುಬಂದಿದೆ. ಅಲ್ಲದೆ ಈ ಕ್ಷೇತ್ರದಲ್ಲಿ ನಾಲ್ಕು ದಶ
ಗಳಿಗಿಂತ ಹೆಚ್ಚು ಕಾಲ ಸ್ಟ್ರಾಂಗ್ ಮತ್ತು ಅವನ ಅನುಯಾಯಿ
ಗಳು ನಡೆಸಿದ ನಿರಂತರ ಕೃಷಿ, ಅಭಿರುಚಿಯಳತೆಗೆ ಭದ
ಬುನಾದಿಯನ್ನು ಹಾಕಿದೆ ಎಂಬುದರಲ್ಲಿ ಎರಡಭಿಪ್ರಾಯವಿಲ್ಲ

ಅಭಿರುಚಿಗಳ ನಿರ್ಧಾರಕಗಳಲ್ಲಿ ಲಿಂಗವನ್ನು ಯಾರು
ಕಡೆಗಣಿಸುವಂತಿಲ್ಲ. ಸ್ತ್ರೀ-ಪುರುಷರ ಅಭಿರುಚಿಗಳಲ್ಲಿ ಸಾಮ
ವಿದ್ದರೂ ವ್ಯತ್ಯಾಸಗಳು ಗಣನೀಯ ಪ್ರಮಾಣದಲ್ಲಿ ಕಂಡ
ಬರುತ್ತವೆ. ಈ ತಥ್ಯಾಂಶವನ್ನು ಬಹಳ ಹಿಂದೆಯೇ ಪ
ಗಣಿಸಿದ ಸ್ಟ್ರಾಂಗನು, ಸ್ತ್ರೀ-ಪುರುಷರಿಗೆ ತನ್ನ ಅಭಿರುಚಿ ಅಂ
ಮಾಲೆಯಲ್ಲಿ ಪ್ರತ್ಯೇಕ ರಚನಾ ಬಂಧಗಳನ್ನು ರೂಪಿಸಿದ್ದಾನೆ
ಈ ರಚನಾ ಬಂಧಗಳಿಗೆ ಪ್ರತ್ಯೇಕ ಅಂಕನ ಕುಂಜಿಗಳನ್ನೂ
ತಯಾರಿಸಿದ್ದಾನೆ.

ಪುರುಷರ ಅಭಿರುಚಿಗಳನ್ನು ಅಳೆಯಲು ಸ್ಟ್ರಾಂಗನ
ರೂಪಿಸಿದ ರಚನಾ ಬಂಧದಲ್ಲಿ ಒಟ್ಟು ೪೦೦ ಪರೀಕ್ಷಾಂಶಗಳಿವೆ
ಇವುಗಳನ್ನು ವೃತ್ತಿಗಳು, ಪಠ್ಯವಿಷಯಗಳು ಎಂದು ಮುಂತಾ
ವಿಂಗಡಿಸಲಾಗಿದೆ. ಇವುಗಳಲ್ಲಿ ಹಲವು ಪರೀಕ್ಷಾಂಶಗಳ
ಪ್ರತಿಯೊಂದಕ್ಕೂ ಪರೀಕ್ಷಾರ್ಥಿಯು ತನ್ನ ಅನುಕ್ರಿಯೆಯನ್ನು

ಸೂಚಿಸಲು ಅನುಕೂಲವಾಗುವಂತೆ ಮೂರು ಪರ್ಯಾಯ ಉತ್ತರಗಳನ್ನು ಕೊಡಲಾಗಿವೆ. ಅವು–'ಪ್ರಿಯ', 'ಅಪ್ರಿಯ' ಮತ್ತು 'ನಿರ್ಲಿಪ್ತ'. ಈ ರೀತಿಯ ಅನುಕ್ರಿಯೆಗಳಿಗೆ ಹೊರತಾದ ಪರೀಕ್ಷಾಂಶಗಳಲ್ಲಿ, ಚಟುವಟಿಕೆಗಳು, ಶಕ್ತಿಸಾಮರ್ಥ್ಯಗಳು ಮತ್ತು ಜೋಡಿ ಅಂಶಗಳು ಎಂಬ ವಿಭಾಗಗಳಿವೆ. ಇವುಗಳಲ್ಲಿ ಮೊದಲನೆಯ ವಿಭಾಗದ ಅಂಶಗಳಿಗೆ ಪರೀಕ್ಷಾರ್ಥಿಯು ತನ್ನ ಇಷ್ಟಾನುಸಾರ ಶ್ರೇಣ್ಯಂಕ (rank)ಗಳನ್ನು ಬರೆಯಬೇಕು. ಎರಡನೇ ವಿಭಾಗದಲ್ಲಿರುವ ಜೋಡಿಯಂಶಗಳಲ್ಲಿ ಒಂದನ್ನು ಮತ್ತೊಂದರೊಡನೆ ಹೋಲಿಸಿ, ಪರೀಕ್ಷಾರ್ಥಿಯು ಅವೆರಡರಲ್ಲಿ ತನಗೆ ಯಾವುದು ಹೆಚ್ಚು ಇಷ್ಟವೆಂಬುದನ್ನು ತಿಳಿಸಬೇಕು. ಕೊನೆಯದಾಗಿ, ಮೂರನೆಯ ವಿಭಾಗದಲ್ಲಿರುವ ಶಕ್ತಿ–ಸಾಮರ್ಥ್ಯಗಳು ಮತ್ತು ಇತರ ಲಕ್ಷಣಗಳು ತನಗೆ ಎಷ್ಟರಮಟ್ಟಿಗೆ ಅನ್ವಯಿಸುತ್ತವೆ ಎಂಬುದನ್ನು ತಿಳಿದು, ಪರೀಕ್ಷಾರ್ಥಿಯು ಅವುಗಳಿಗೆ ಬೆಲೆಯನ್ನು ಕಟ್ಟಬೇಕಾಗುತ್ತದೆ. ಈ ಕೆಳಗೆ ಕೊಡಲಾಗಿರುವ ಕೆಲವು ಆಯ್ದ ಪರೀಕ್ಷಾಂಶಗಳು ಸೂಕ್ತ ಉದಾಹರಣೆಗಳು:

	L	I	D
ಪರೀಕ್ಷಾಂಶಗಳು	ಪ್ರಿಯ	ನಿರ್ಲಿಪ್ತ	ಅಪ್ರಿಯ
	(ಪ್ರಿ)	(ನಿ)	(ಅ)
ವೃತ್ತಿಗಳು :			
೧. ನಟ	೦	೦	೦
೨. ಜಾಹೀರಾತುಗಾರ	೦	೦	೦

ಚಟುವಟಿಕೆಗಳು :	ಪ್ರಿಯ	ನಿರ್ಲಿಪ್ತ	ಅಪ್ರಿಯ
೧. ಆಗಂತುಕನೊಂದಿಗೆ ಸಂಭಾಷಣೆ ಪ್ರಾರಂಭಿಸುವುದು	೦	೦	೦
೨. ಮಕ್ಕಳಿಗೆ ಕಲಿಸುವುದು	೦	೦	೦

ಪರೀಕ್ಷಾರ್ಥಿಯಿಂದ ಪಡೆದ ಅನುಕ್ರಿಯೆಗಳಿಗೆ ಅಂಕ ಕುಂಜಿಗಳ ನೆರವಿನಿಂದ ಬೆಲೆ ಕಟ್ಟಿ ಪ್ರಾಪ್ತಾಂಕಗಳನು ನಿರ್ಧರಿಸಲಾಗುತ್ತದೆ. ಅನಂತರ ಪ್ರಾಪ್ತಾಂಕಗಳಿಗೆ, ಪ್ರಮಾಣಿತ ಅಂಕಗಳು (Standard scores) ಮತ್ತು ಅಕ್ಷರ ವರ್ಗಗಳ (Letter grades) ನ್ನು ಆಧರಿಸಿ ಅರ್ಥವಿವರ ಕೊಡಲಾಗುತ್ತದೆ. ಪ್ರಮಾಣಿತ ಅಂಕಗಳ ಪಾರ್ಶ್ವರೇಖೆ ಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಆಗ ವ್ಯಕ್ತಿ ಯಲ್ಲಿರುವ ವಿವಿಧ ಅಭಿರುಚಿಗಳ ವಿನ್ಯಾಸವು ಸ್ಪಷ್ಟವಾ ನಮಗೆ ಗೋಚರಿಸುತ್ತದೆ.

ಅಭಿರುಚಿಗಳ ಅಳತೆಗೆ ಸ್ಟ್ರಾಂಗನು ಸಲ್ಲಿಸಿದ ಸೇವೆಯು ಮಹತ್ತಾದುದು ಮಾತ್ರವಲ್ಲದೆ ಬೃಹತ್ತಾದುದೂ ಹೌದು ಸುದೀರ್ಘ ಕಾಲದವರೆಗೆ ಈ ಕ್ಷೇತ್ರದಲ್ಲಿ ದುಡಿದ ಅವನು ತನ್ನ ಅನುಯಾಯಿಗಳ ನೆರವಿನಿಂದ ಅನೇಕ ಸಮಸ್ಯೆಗಳನು ಬಿಡಿಸಲು ಪ್ರಯತ್ನಿಸಿದ್ದಾನೆ. ಅವರು ರೂಪಿಸಿರುವ ೫೦ಕ್ಕೂ ಹೆಚ್ಚು ಅಂಕನ ಕುಂಜಿಗಳು, ವಿವಿಧ ವೃತ್ತಿಗಳಲ್ಲಿ ಕಂಡ ಬರುವ ಅಭಿರುಚಿ ವಿನ್ಯಾಸಗಳನ್ನು ಕಂಡುಹಿಡಿಯಲು ಬಹ ನೆರವಾಗಿರುವುದರ ಜೊತೆಗೆ, ಜಗತ್ತಿನಾದ್ಯಂತ, ಈ ಕುಂ ಗಳು ಪರಿಣತ ಪ್ರಿಯವಾಗಿರುವುದು ಗಮನಾರ್ಹ ಅಂಶ.

ಸ್ಟ್ರಾಂಗನ ಅಭಿರುಚಿ ಅಂಶಮಾಲೆಯ ಸಿಂಧುತ್ವ ಮತ್ತು ವಿಶ್ವಾಸನೀಯತೆಗಳು, ಅದರ ಬಹುದೀರ್ಘ ಉಪಯುಕ್ತತೆಯಲ್ಲೇ ಅಡಕವಾಗಿರುವುದನ್ನು ಕಾಣಬಹುದು. ಎನ್. ಸಿ. ಇ. ಆರ್. ಟಿ. ಅಭಿರುಚಿ ಅಂಶಮಾಲೆಯ ಯೋಜನೆಯು ಪ್ರಾರಂಭವಾದ ಮೊದಲಲ್ಲಿ, ಅದರ ಪ್ರಾಥಮಿಕ ರೂಪರೇಷೆಗಳನ್ನು ಸಿದ್ಧಪಡಿಸಲು ನಾವು ಸಂಶೋಧಕರೆಲ್ಲಾ ದೆಹಲಿಯಲ್ಲಿ ಸುಮಾರು ಒಂದು ವಾರದ ಕಮ್ಮಟದಲ್ಲಿ ಭಾಗಿಯಾಗಿದ್ದೆವು. ಆ ಸಂದರ್ಭದಲ್ಲಿ ಸ್ಟ್ರಾಂಗನ ಅಭಿರುಚಿ ಅಂಶಮಾಲೆಯ ಸಿಂಧುತ್ವದ ಪ್ರಶ್ನೆ ಚರ್ಚೆಗೆ ಬಂದಾಗ, ಖ್ಯಾತ ಮನೋವಿಜ್ಞಾನಿ ಡಾ. ಸಿಬ್. ಕೆ. ಮಿತ್ರಾರವರು ಆಡಿದ ಮಾತು ನನಗೆ ಇನ್ನೂ ನೆನಪಿದೆ. "ಅದರ ಅವಗುಣಗಳು ಏನೇ ಇರಲಿ, ಆದರೆ ಅದು ತನ್ನ ಉಪಯುಕ್ತತೆಯನ್ನು ಶಂಕೆಗೆ ಅವಕಾಶವಿಲ್ಲದಷ್ಟು ಸ್ಥಾಪಿಸಿದೆ." ಡಾ|| ಮಿತ್ರಾರವರ ಅಭಿಮತವನ್ನು ಅಲ್ಲಗಳೆಯಲು ಕಷ್ಟಸಾಧ್ಯ.

ಕ್ಯೂಡರನ ಆಯ್ಕಾಬಂಧ : ಸ್ಟ್ರಾಂಗನ ಅಭಿರುಚಿ ಅಂಶಮಾಲೆಗೆ ಹೋಲಿಸಿದರೆ ಇದು ಸ್ವಲ್ಪ ಈಚಿನದಾದರೂ, ವ್ಯಾಪ್ತ ಉಪಯುಕ್ತತೆಗೆ ಹೆಸರಾಗಿದೆ. ಈ ಆಯ್ಕಾಬಂಧವು ಸ್ಟ್ರಾಂಗನ ಅಭಿರುಚಿ ಅಂಶಮಾಲೆಗಿಂತ ಬಹಳ ಭಿನ್ನವಾಗಿದೆ. ಇಲ್ಲಿ ವಿಶಿಷ್ಟ ವೃತ್ತಿಗಳಿಗೆ ಬದಲಾಗಿ ವಿಶಾಲ ಕಾರ್ಯಕ್ಷೇತ್ರಗಳಿಗೆ ಅನ್ವಯಿಸುವ ಪರೀಕ್ಷಾಂಶಗಳನ್ನು ಸೇರಿಸಲಾಗಿದೆ. ಈ ಅಂಶಮಾಲೆಯು ತರ್ಕಸಿಂಧುತ್ವ (Logical Validity) ವನ್ನು ಅವಲಂಬಿಸಿ ರೂಪಿತವಾದುದಾಗಿದೆ.

ಈ ಅಂಶಮಾಲೆಯಲ್ಲಿ ಒಟ್ಟು ೧೬೮ ಬಲವಂತ ಆಯ್ಕೆ ಅಂಶಗಳಿವೆ (Forced choice items) ಈ ಕೆಳಗಿನ ಉದಾಹರಣೆ ತೋರಿಸುವಂತೆ, ಒಂದೊಂದು ಅಂಶದಲ್ಲಿಯೂ ಮೂರು ಮೂರು ಚಟುವಟಿಕೆಗಳನ್ನು ಕೊಡಲಾಗಿದೆ:

ಲಲಿತ ಕಲೆಗಳ ಸಂಗ್ರಹಾಲಯಕ್ಕೆ ಭೇಟಿಕೊಡುವುದು.

ಕೊಳೆಗೇರಿ (Slum) ವಾಸಿಗಳಿಗಾಗಿರುವ ಮನೋರಂಜನಾ ಕೇಂದ್ರಕ್ಕೆ ಭೇಟಿಕೊಡುವುದು.

ಪ್ರಸಿದ್ಧ ವೈದ್ಯಕೀಯ ಸಂಶೋಧನಾ ಪ್ರಯೋಗಾಲಯಕ್ಕೆ ಭೇಟಿಕೊಡುವುದು.

ಮೇಲಿನ ಅಂಶದಲ್ಲಿ, ಒಂದೊಂದು ಚಟುವಟಿಕೆಯೂ ಒಂದೊಂದು ರೀತಿಯ ಅಭಿರುಚಿಯನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಪರೀಕ್ಷಾರ್ಥಿಯು ತನ್ನ ಇಷ್ಟಾನಿಷ್ಟಗಳನ್ನು ಸಾಪೇಕ್ಷವಾಗಿ ವ್ಯಕ್ತಪಡಿಸಬೇಕಾಗುತ್ತದೆ. ಆತನು ಮೂರರಲ್ಲಿ ಯಾವುದು ಹೆಚ್ಚು ಪ್ರಿಯವಾದುದು ಮತ್ತು ಯಾವುದು ಹೆಚ್ಚು ಅಪ್ರಿಯವಾದುದು ಎಂದು ತಿಳಿಸಿದಾಗ, ಹೆಚ್ಚು ಪ್ರಿಯವಾದುದಕ್ಕೆ ೨ ಅಂಕಗಳನ್ನು, ಹೆಚ್ಚು ಅಪ್ರಿಯವಾದುದಕ್ಕೆ ೦ ಅಂಕವನ್ನೂ ಮತ್ತು ಉಳಿದುದಕ್ಕೆ ೧ ಅಂಕವನ್ನೂ ಕೊಡಲಾಗುತ್ತದೆ. ಪ್ರಾಪ್ತಾಂಕಗಳನ್ನು ಪ್ರಮಾಣಾಂಕಗಳಾಗಿ ಮಾರ್ಪಡಿಸಿ, ಪಾರ್ಶ್ವರೇಷೆಯನ್ನು ರಚಿಸಲಾಗುತ್ತದೆ. ಅದು ಅಭಿರುಚಿ ವಿನ್ಯಾಸವನ್ನು ಸೂಚಿಸುತ್ತದೆ. ಕ್ಯೂಡರನ ಆಯ್ಕೆ ಬಂಧದಲ್ಲಿರುವ ಪರೀಕ್ಷಾಂಶಗಳ ವ್ಯಾಪ್ತಿಯು ಈ ಕೆಳಗಿನ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ:

ತಾಂತ್ರಿಕ	ಪ್ರೇರಣೆ	ಸಂಗೀತ
ಗಣನೆ	ಕಲೆ	ಸಮಾಜಸೇವೆ
ವಿಜ್ಞಾನ	ಸಾಹಿತ್ಯ	ಗುಮಾಸ್ತೆ
		ಹೊರಾಂಗಣ

ಕ್ಯೂಡರನ ಆಯ್ಕಾಬಂಧಕ್ಕೆ ಉತ್ತಮ ವಿಶ್ವಾಸನೀಯತೆ ಮತ್ತು ಸಿಂಧುತ್ವಗಳಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ.

ಎನ್. ಸಿ. ಇ. ಆರ್. ಟಿ. ಅಭಿರುಚಿ ಅಂಶಮಾಲೆ: ಈ ಅಂಶಮಾಲೆಯು ಈಗಾಗಲೇ ನಾಲ್ಕು ಭಾಷೆಗಳಲ್ಲಿ–ಕನ್ನಡ, ಮರಾಠಿ, ಹಿಂದಿ ಮತ್ತು ಇಂಗ್ಲಿಷ್ ಸಿದ್ಧವಾಗಿದೆ. ನವದೆಹಲಿಯ, ರಾಷ್ಟ್ರೀಯ ಶೈಕ್ಷಣಿಕ ಮತ್ತು ತರಬೇತಿ ಮಂಡಳಿಯು ತನ್ನ ಸಹಕಾರ ಪರೀಕ್ಷಾ ರಚನಾ ಯೋಜನೆಯಲ್ಲಿ ರೂಪಿಸಿರುವ ಈ ಅಂಶಮಾಲೆಯಲ್ಲಿ ಎರಡು ರೂಪ (form)ಗಳಿವೆ-ಒಂದು ಪ್ರೌಢಶಾಲೆಗಾಗಿ ಮತ್ತು ಇನ್ನೊಂದು ಕಾಲೇಜಿಗಾಗಿ. ಈ ಅಂಶಮಾಲೆಯ ರೂಪಣೆಗೆ ಸಹಕಾರವಿತ್ತ ಇತರ ನಾಲ್ಕು ಕೇಂದ್ರಗಳು- ಮೈಸೂರು, ಬೊಂಬಾಯಿ, ಅಲಿಘಡ ಮತ್ತು ಪಾಟ್ನಾ.

ಈ ಅಂಶಮಾಲೆಯ ಪ್ರತಿಯೊಂದು ರೂಪದಲ್ಲಿಯೂ ನಾಲ್ಕುರೀತಿಯ ಅಂಶಗಳಿವೆ. ಅವು ಬಹುವರಣ, ಪ್ರಣಾಲಿ, ಜೋಡಿ ಸಹಚರ, ಮತ್ತು ಆಯ್ಕಾಪಟ್ಟಿ ಪರೀಕ್ಷಾಂಶಗಳು. ಈ ಪರೀಕ್ಷಾಂಶಗಳಿಗೆ ಉದಾಹರಣೆಗಳನ್ನು ಈ ಕೆಳಗೆ ಕಾಣ

ಬಹುದು (ಕಾಲೇಜು ಮಟ್ಟದ ಅಂಶವಾಲೆಯಿಂದ ಆಯ್ದ ಪರೀಕ್ಷಾಂಶಗಳು).

ಭಾಗ I ಸನ್ನಿವೇಶಾತ್ಮಕ ಪರೀಕ್ಷಾಂಶಗಳು (ಬಹುವರಣ)

ನೀವು ಏಕಾಂಗಿಯಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ಯಾವ ಬಗೆಯ ಆಲೋಚನೆಗಳು ನಿಮ್ಮ ಮನಸ್ಸಿನಲ್ಲಿ ಸುಳಿಯುತ್ತವೆ ?

೧) ಆರ್ಥಿಕ ಅಸಮಾನತೆ
೨) ಶೈಕ್ಷಣಿಕ ಸಮಸ್ಯೆಗಳು
೩) ರೋಗಗಳು ಮತ್ತು ಅವುಗಳ ಚಿಕಿತ್ಸೆ
೪) ಕ್ರೀಡಾಮಟ್ಟ

ಭಾಗ II ಪ್ರಣಾಲಿ ಪರೀಕ್ಷಾಂಶಗಳು (ಪ್ರಿಯ '+'; ಅಪ್ರಿಯ '—'; ಅನುಮಾನ '?')

೫೬) ಧಾರ್ಮಿಕ ಸಭೆಗಳನ್ನು ವ್ಯವಸ್ಥೆ ಮಾಡುವುದು
೧೦೬) ಪ್ರತಿಭಾನ್ವಿತ ನ್ಯಾಯಶಾಸ್ತ್ರಜ್ಞರ ಪುಸ್ತಕಗಳನ್ನು ಓದುವುದು.
೧೫೬) ಬೆಂಕಿಯನ್ನು ಆರಿಸುವ ವಿವಿಧ ವಿಧಾನಗಳನ್ನು ಕಲಿತುಕೊಳ್ಳುವುದು.
೨೦೬) ವ್ಯಾಪಾರ ಸಂಸ್ಥೆಯೊಂದರ ಹಣಕಾಸಿನ ತಃಖ್ತೆ (Statement) ಯನ್ನು ಓದುವುದು.
೨೪೬) ಒಂದು ವಸ್ತುಪ್ರದರ್ಶನದ ತಾಂತ್ರಿಕ ವಿಭಾಗಕ್ಕೆ ಭೇಟಿ ಕೊಡುವುದು.

ಭಾಗ III ಜೋಡಿ ಸಹಯೋಗಿಗಳು (ಎರಡರಲ್ಲಿ ಒಂದನ್ನು ಆರಿಸುವುದು ಅಥವಾ '?' ಚಿಹ್ನೆ ಹಾಕುವುದು)

೨೫೩) ೧. ಸೈದ್ಧಾಂತಿಕ (Theoretical) ?
೨. ಕಾರ್ಯಾತ್ಮಕ (Practical)

೨೫೯) ೧. ತಯಾರು ಮಾಡುವುದು
೨. ಮಾರಾಟ ಮಾಡುವುದು

ಭಾಗ IV ಆಯ್ಕಾ ಪಟ್ಟಿ (ಇಷ್ಟವಾದ ಎರಡರ ಮುಂದೆ '+' ಚಿಹ್ನೆಯನ್ನೂ; ಇಷ್ಟವಿಲ್ಲದ ಎರಡರ ಮುಂದೆ '—' ಚಿಹ್ನೆಯನ್ನೂ ಹಾಕುವುದು.

೨೬೦) ಪುಸ್ತಕಗಳು :
೧. ಕಲೆ ಮತ್ತು ಶಿಲ್ಪ
೨. ಬೇಸಾಯ
೩. ಜಾನಪದ ಸಾಹಿತ್ಯ
೪. ಕಲ್ಪನಾ ಕಥೆಗಳು
೫. ವೈಜ್ಞಾನಿಕ ಸಂಶೋಧನೆಗಳು
೬. ಯುದ್ಧಸ್ಮರಣೆಗಳು

ಈ ಅಂಶಮಾಲೆಯ ಎರಡು ರೂಪಗಳಲ್ಲಿರುವ ಪರೀಕ್ಷಾಂಶಗಳ ಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.

ಕೋಷ್ಟಕ: ಎನ್. ಸಿ. ಇ. ಆರ್. ಟಿ. ಅಭಿರುಚಿ ಅಂಶಮಾಲೆಯಲ್ಲಿರುವ ಪರೀಕ್ಷಾಂಶಗಳು :

ರೂಪಗಳು	ಭಾಗ I	ಭಾಗ II	ಭಾಗ III	ಭಾಗ IV	ಒ
ಪ್ರೌಢಶಾಲಾರೂಪ	೫೦	೨೦೦	೨೫	೫	೨
ಕಾಲೇಜರೂಪ	೫೦	೨೦೦	೨೫	೫	೨

ಎನ್. ಸಿ. ಇ. ಆರ್. ಟಿ. ಅಂಶಮಾಲೆಯಲ್ಲಿ, ಕ
ಣಿಕ, ಆರ್ಥಿಕ, ನ್ಯಾಯ ಮತ್ತು ಆಡಳಿತ, ಶೈಕ್ಷಣಿಕ, ವೈ
ಕೀಯ, ವೈಜ್ಞಾನಿಕ ಮುಂತಾದ ಹದಿಮೂರು ಅಭಿರು
ಕ್ಷೇತ್ರಗಳಿಗೆ ಸಂಬಂಧಿಸಿದ ಪರೀಕ್ಷಾಂಶಗಳಿವೆ. ಆದರೆ ಈ
ಇವುಗಳಲ್ಲಿ ಕೆಲವು ಕ್ಷೇತ್ರಗಳಿಗೆ ಮಾತ್ರ ಅಂಕನಕುಂಜಿಗ
ಸಿದ್ಧವಾಗಿವೆ. ಪ್ರತಿಯೊಂದು ಕ್ಷೇತ್ರದಲ್ಲಿರುವವರ ಅಭಿರು
ಗಳ ಭೇದವನ್ನೂ ತಿಳಿಯಲು ಅನುಕೂಲವಾಗುವಂತ
ವಿಭೇದಾತ್ಮಕ ಅಂಕನಕುಂಜಿಗಳನ್ನು ರಚಿಸುವ ಪ್ರಯ
ಗಳೂ ನಡೆದಿವೆ. ಒಟ್ಟಿನಲ್ಲಿ ಈ ಅಂಶಮಾಲೆಯು ವೈವಿ
ಪೂರ್ಣವೂ ವಿಭೇದನ ಸಾಮರ್ಥ್ಯವುಳ್ಳವೂ ಆದ ಪರೀಕ್ಷಾಂ
ಗಳಿಂದ ಕೂಡಿರುವುದರಿಂದ, ಹೆಚ್ಚು ಉಪಯುಕ್ತ ಸಂಶೋ
ಧನಾ ಸಾಧನವಾಗಬಲ್ಲದೆಂದು ನಿರೀಕ್ಷಿಸಲಾಗಿದೆ.

ಇತರ ಅಭಿರುಚಿ ಅಂಶಮಾಲೆಗಳು : ಥರ್ಸ್ಟ
ಅಭಿರುಚಿ ಪಟ್ಟಿ, ಲೀಥಾರ್ಪೆ ಅಭಿರುಚಿ ಅಂಶಮಾಲೆ, ಗಿಲ್
ಫೋರ್ಡ್–ಸ್ನೀಡ್‌ಮನ್–ಜಿಮ್ಮರ್‌ಮನ್ ಅಭಿರುಚಿ ಸಮೀ
ಮತ್ತು ಈ ಮೊದಲೇ ಪ್ರಸ್ತಾಪಿಸಲಾದ ಕ್ಲೀಟನನ ಅಭಿರು
ಅಂಶಮಾಲೆ ಮತ್ತು ಮಿನೆಸೋಟಾ ವೃತ್ತಿಯಭಿರುಚಿ ಅಂ
ಮಾಲೆಗಳೂ ಇಂದು ಹೆಚ್ಚು ಬಳಕೆಯಲ್ಲಿವೆ. ಈ ಎ

ಅಂಶಮಾಲೆಗಳಲ್ಲಿ ಅವುಗಳ ಗಾತ್ರ ಮತ್ತು ಮೌಲ್ಯನ ವಿಧಾನಗಳಲ್ಲಿ ಪರಸ್ಪರ ವ್ಯತ್ಯಾಸಗಳು ಕಂಡುಬಂದರೂ, ಅವುಗಳಲ್ಲೆಲ್ಲ ಕೆಲವು ಸಾಮಾನ್ಯ ಲಕ್ಷಣಗಳು ಅಂತರ್ಗತವಾಗಿರುವುದನ್ನು ಕಾಣಬಹುದು.

ಅಭಿರುಚಿಗಳ ಅಳತೆಯು ಹೆಚ್ಚು ಹೆಚ್ಚು ವಸ್ತುನಿಷ್ಠವಾದಂತೆ, ಅವುಗಳ ಬಗ್ಗೆ ನಮ್ಮ ಒಳನೋಟವು ಹೆಚ್ಚುತ್ತದೆ. ತನ್ಮೂಲಕ, ವ್ಯಕ್ತಿಯಲ್ಲಿರುವ ಶಕ್ತಿಸಾಮರ್ಥ್ಯಗಳ ಜೊತೆಗೆ, ಅವನಲ್ಲಿ ರೂಪಗೊಂಡು, ಸಾಪೇಕ್ಷವಾಗಿ ಸ್ಥಿರತೆ ಪಡೆದಿರುವ ಅಭಿರುಚಿಗಳ ವಿನ್ಯಾಸವನ್ನೂ ಹೆಚ್ಚು ನಿಷ್ಕೃಷ್ಟವಾಗಿ ತಿಳಿಯಲು ಸಾಧ್ಯವಾಗುತ್ತದೆ. ಆಗ ಅವುಗಳ ಮುನ್ಸೂಚನೆ ಕೊಡುವುದರ ಜೊತೆಗೆ, ದೊರೆತ ಮಾಹಿತಿಯನ್ನು ವೃತ್ತಿ ಮಾರ್ಗದರ್ಶನಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

೫. ಪರಿಸಮಾಪ್ತಿ

ಅಭಿರುಚಿ ಬಲು ರುಚಿ. ಆದರೆ ಆ ರುಚಿಯನ್ನು ಗುರುತಿಸಿ ಸವಿಯುವ ಶಕ್ತಿ ನಮ್ಮಲ್ಲಿ ಬರಬೇಕು ಅಷ್ಟೆ. ಅನೇಕ ನಿರ್ಭಾಗ್ಯರಲ್ಲಿ ಅವರ ಜೀವಿತದಾದ್ಯಂತ ಗುಪ್ತವಾಹಿನಿಯಂತೆ ಪ್ರವಹಿಸುವ ಅಭಿರುಚಿಗಳ ಆಂತರ್ಯವರಿತು ಅವುಗಳನ್ನು ವ್ಯಕ್ತಸ್ಥಿತಿಗೆ ತರಲು ವ್ಯಕ್ತಿಗಾಗಲೀ, ಸಾಮಾಜಿಕ ನಿಯೋಗಿಗಳಿಗಾಗಲೀ ಸಾಧ್ಯವಾಗುವುದಾದರೆ, ಅದರಿಂದ

ವ್ಯಕ್ತಿ ಸಮಾಜಗಳೆರಡರ ಸಾಧನೆ ಮತ್ತು ಸಂತೃಪ್ತಿಗಳಿಗ
ಅಪಾರ ಅನುಕೂಲ. ಅಭಿವೃದ್ಧಿಶೀಲವೆನಿಸಿರುವ ನಮ್ಮ
ದೇಶದ ನೇತೃಗಳು ವ್ಯಕ್ತಿಯ ಅಂತಃಸತ್ತ್ವಗಳ ಮತ್ತು
ಅಭಿರುಚಿಗಳ ಉಗಮ ಮತ್ತು ವಿಕಾಸಗಳತ್ತ ಆದ್ಯಗಮನ
ಕೊಡಲು ವಿಫಲರಾದಲ್ಲಿ, ರಾಷ್ಟ್ರೋನ್ನತಿಯ ವಿವಿಧ ಶಾಖೆಗಳ
ಹುಲುಸಾಗಿ ಬೆಳೆದು ಫಲ ಪುಷ್ಪಭರಿತವಾಗುವುದನ್ನು ನಿರೀಕ್ಷಿ
ಸುವುದು ಕೇವಲ ಭ್ರಮೆಯಾದೀತು. ವಿವಿಧ ಕಾರ್ಯಕ್ಷೇತ್ರ
ಗಳಲ್ಲಿ ಶಕ್ತಿಶಾಲಿ ನೇತಾರರಾಗಬಲ್ಲಂತಹ ವ್ಯಕ್ತಿಗಳನ್ನು ಅತಿ
ಚಿಕ್ಕಂದಿನಲ್ಲಿಯೇ ಗುರುತಿಸಿ, ಅವರ ಅಂತಸ್ಸತ್ವಗಳ
ಮತ್ತು ಅಭಿರುಚಿಗಳ ಸರ್ವತೋಮುಖ ಬೆಳವಣಿಗೆಗ
ಬೇಕಾದ ಅವಕಾಶಗಳನ್ನು ಕಲ್ಪಿಸಿಕೊಡದಿದ್ದಲ್ಲಿ, ನಮ್ಮ
ರಾಷ್ಟ್ರ ಪುನರುಜ್ಜೀವನ ಕಾರ್ಯವು ಕೇವಲ ಬರಡು ಘೋಷಣ
ಗಳ ಮಟ್ಟದಲ್ಲಿಯೇ ನಿಲ್ಲಬೇಕಾಗುತ್ತದೆ. ಜಾತಿ, ಮತ,
ಭಾಷೆ ಮತ್ತು ಪ್ರದೇಶಗಳ ಭೇದವಿಲ್ಲದೆ ವ್ಯಕ್ತಿಯ ಅಭಿರುಚಿ
ಮತ್ತು ಅಂತಸ್ಸತ್ವಗಳನ್ನು ಗುರುತಿಸಲು ಸಾಧ್ಯ. ಏಕೆಂ
ದರೆ ಅಂತರ್ವಾಹಿನಿಯಾಗಿರುವ ಆ ಅಭಿರುಚಿ ಮತ್ತು
ಈ ಅಂತಸ್ಸತ್ವಗಳು, ಹುಟ್ಟಿನಂದಿನಿಂದ ಅಲ್ಲಲ್ಲಿ
ಚಿಲುಮೆಯ ರೂಪದಲ್ಲಿ ಹೊರಹೊಮ್ಮುತ್ತಿರುತ್ತವೆ. ಈ
ಚಿಲುಮೆಗಳನ್ನು ಸೂಕ್ತ ವಿಧಾನಗಳಿಂದ ವಿಸ್ತರಿಸಿ, ಶಕ್ತ
ಶಯಗಳನ್ನು ನಿರ್ಮಿಸಿ, ಬೇಕೆನಿಸಿದ ವರ್ತನಾವಿಕಾಸಕ್ಕೆ

ಬಳಸಿಕೊಳ್ಳಲು ಸಾಧ್ಯವಿದೆ. ಈ ಕಾರ್ಯಸಾಧನೆಗೆ ಇಂದು ನಮಗೆ ಅತ್ಯಂತ ಅವಶ್ಯಕತೆ ಇರುವುದು ಪ್ರಗತಿಪರ ಮನೋಭಾವ, ದೃಢನಿಶ್ಚಯ ಮತ್ತು ಸಮರ್ಥ ಕಾರ್ಯಾಚರಣೆಗಳು. ದಿನಕ್ಕೊಂದು ಪದ್ಧತಿಯಿಂದ ಛಿದ್ರವಾಗಿರುವ ಇಂದಿನ ಶಿಕ್ಷಣ ವ್ಯವಸ್ಥೆಯು ಈ ಕಾರ್ಯವನ್ನು ಸಾಧಿಸುವ ಶಕ್ತಿಯಿಂದ ವಂಚಿತವಾಗಿದೆ ಎಂದು ಹೇಳಿದರೆ ಬಹುಶಃ ತಪ್ಪಾಗದು. "ನಮ್ಮ ಮಕ್ಕಳು ದೇಶದ ಸಂಪನ್ಮೂಲಗಳು" ಎಂಬ ಘೋಷಣೆಯ ಅಂತರ್ಯವನ್ನು ಅರಿಯಲು ಇನ್ನೂ ಅಷ್ಟು ಕಾಲ ಮಿಂಚಿಲ್ಲ. ಈ ಸಂಪನ್ಮೂಲಗಳೇ ನಮ್ಮ ರಾಷ್ಟ್ರ, ನಮ್ಮ ವಿಶ್ವ. ಅವರಿಂದಲೇ ಅವರನ್ನು ಬೆಳೆಸುವಂತಹ ಬೃಹದ್ ಯೋಜನೆಯ ಬಗ್ಗೆ ಸಂಬಂಧಪಟ್ಟವರು ಪುನರ್ಚಿಂತನೆ ನಡೆಸುವುದು ಅತ್ಯಾವಶ್ಯಕ. ನವನಾಯಕರು ಈ ದಿಸೆಯಲ್ಲಿ ಗತಿಶೀಲ ಮಾರ್ಗದರ್ಶನ ನೀಡಬಲ್ಲರೇ ?

ಅಭಿರುಚಿಗಳು ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿರುವುದರಿಂದ, ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಗೆ ಸೂಕ್ತ ಕ್ರಮ ಕೈಕೊಂಡಾಗ, ಅವುಗಳ ಅಭಿವೃದ್ಧಿ ತಾನಾಗಿಯೇ ಆಗುತ್ತದೆ. ಆದರೆ ಇಂತಹ ಆಶಯ ಸಾಧನೆಗೆ ವೈಜ್ಞಾನಿಕ ಮಾರ್ಗ ಅನಿವಾರ್ಯವೆಂಬುದನ್ನು ನಾವು ಮರೆಯಲಾಗದು.

೬. ಆಕರ ಗ್ರಂಥಗಳು ಮತ್ತು ಲೇಖನಗ

Clark : Vocational Interests of N Professional Men. Uni. of Minnesota Pr Minneopolis, 1961.

Strong, E. K. Vocational Interest Men and Women. Stanford University Pr California, 1943.

Super, D. E Appraising vocatio fitness, 1949.

Notes kept by the author on construction of N. C. E. R. T. Inte Inventory.

ಧರಣೇಂದ್ರಯ್ಯ, ಎ. ಎಸ್. ವಿಕಾಸ ಮನೋವಿಜ್ಞಾ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲ ಮೈಸೂರು ೧೯೭೧.

,, ಅಭಿರುಚಿಗಳ ಅಳತೆ, ಮಾನವಿಕ ಕರ್ನಾಟಕ ಕರ್ನಾಟಕ ವಿಶ್ವವಿದ್ಯಾಲ ಧಾರವಾಡ, ಸಂಪುಟ ೧೯೭೬.

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧ ಗ್ರಂಥಾಲಯದ ಅಂದು-ಇಂದು
—ಎಸ್. ಆರ್. ಗುಂಜಾಳ

೨ ಮಾನವನ ಸೇವೆಯಲ್ಲಿ ಪರಮಾಣು ಶಕ್ತಿ
—ಎಸ್. ಸಿ. ಗಲಗಲಿ

೩ ರಾಯಚೂರ ಜಿಲ್ಲೆಯ ಆರ್ಥಿಕಾಭಿವೃದ್ಧಿಯಲ್ಲಿ
ತುಂಗಭದ್ರಾಯೋಜನೆಯ ಪಾತ್ರ —ಕೆ. ಮಾರ್ಕಂಡಪ್ಪ

೪ ಭಕ್ತ ಸೂರದಾಸ —ಬಸವರಾಜ ಅಮ್ಮಿನಗಿ

೫ ಹಳ್ಳಿಗಳಲ್ಲಿ ಸಾಲದಸೌಲಭ್ಯ ಹಾಗೂ
ಅದರ ಸಮಸ್ಯೆಗಳು —ಎಸ್. ಬಿ. ದುರಗಿ

೬ ಶಿವಶರಣರ ಸಮನ್ವಯಯೋಗ
—ಎಂ. ನಾ. ಮ. ದೊಡ್ಡಯ್ಯಶಾಸ್ತ್ರಿ

೭ ಮಾಸ್ತಿಕಲ್ಲು —ಚೆನ್ನಕ್ಕ ಎಲಿಗಾರ

೮ ಕಲ್ಯಾಣ ರಾಜ್ಯದ ಕಲ್ಪನೆ —ಆರ್. ವ್ಹಿ. ಹೊರಡಿ

೯ ಜೈನ ನೀತಿ ಶಾಸ್ತ್ರ —ಕಲ್ಯಾಣಪ್ರಸಾದ ಹನಗಂಡಿ

೧೦ ಪೋಲೀಸಿನವರು ಮತ್ತು ಸಾರ್ವಜನಿಕರು
—ಎನ್. ನಾಗರಾಜರಾವ್

ಪ್ರಸಾರಾಂಗ ವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩